ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966

(1966ರ ಅಧಿನಿಯಮ ಸಂಖ್ಯೆ 32)

[ಆಗಸ್ಟ್ 27, 2003 ರಂದು ಜಾರಿಯಲ್ಲಿದ್ದಂತೆ]

# THE BEEDI AND CIGAR WORKERS (CONDITIONS OF EMPLOYMENT) ACT, 1966

(Act No. 32 of 1966)

[As on 27th August 2003]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ

2004

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966

(1966ರ ಅಧಿನಿಯಮ ಸಂಖ್ಯೆ 32)

[ಆಗಸ್ಟ್ 27, 2003 ರಂದು ಜಾರಿಯಲ್ಲಿದ್ದಂತೆ]

# THE BEEDI AND CIGAR WORKERS (CONDITIONS OF EMPLOYMENT) ACT, 1966

(Act No. 32 of 1966)

[As on 27th August 2003]

# ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966

ವಿಷಯಾನುಕ್ರಮಣಿಕೆ

ಪ್ರಕರಣಗಳು: ಪುಟ


| | | |
|---|---|---|
| 1. | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2. | ಪರಿಭಾಷೆಗಳು | 1 |
| 3. | ಕೈಗಾರಿಕಾ ಆವರಣಗಳಿಗೆ ಲೈಸೆನ್ಸು ನೀಡುವುದು | 2 |
| 4. | ಲೈಸೆನ್ಸುಗಳು | 2 |
| 5. | ಅಪೀಲುಗಳು | 3 |
| 6. | ಇನ್ಸ್‌ಪೆಕ್ಟರು | 3 |
| 7. | ಇನ್ಸ್‌ಪೆಕ್ಟರ್‌ನ ಅಧಿಕಾರಗಳು | 4 |
| 8. | ಸ್ವಚ್ಛತೆ | 4 |
| 9. | ಗಾಳಿ- ಬೆಳಕು | 4 |
| 10. | ಜನದಟ್ಟಣೆ | 5 |
| 11. | ಕುಡಿಯುವ ನೀರು | 5 |
| 12. | ಕಕ್ಕಸುಗಳು ಮತ್ತು ಮೂತ್ರಿಗಳು | 5 |
| 13. | ತೊಳೆಯುವ ಸೌಕರ್ಯಗಳು | 5 |
| 14. | ಮಕ್ಕಳ ಪಾಲನಾ ಗೃಹಗಳು | 5 |
| 15. | ಪ್ರಥಮ ಚಿಕಿತ್ಸೆ | 6 |
| 16. | ಕ್ಯಾಂಟೀನುಗಳು | 6 |
| 17. | ಕೆಲಸದ ವೇಳೆ | 6 |
| 18. | ಅಧಿಕಕಾಲದ ಕೆಲಸಕ್ಕಾಗಿ ಮಜೂರಿಗಳು | 6 |
| 19. | ವಿಶ್ರಾಂತಿಗಾಗಿ ಮಧ್ಯಂತರ | 6 |
| 20. | ವ್ಯಾಪ್ತಿ | 7 |
| 21. | ವಾರದ ರಜಾ ದಿನಗಳು | 7 |
| 22. | ಕೆಲಸದ ಅವಧಿಗಳ ನೋಟೀಸು | 7 |
| 23. | ಕೆಲಸದ ಗಂಟೆಗಳು 22ನೇ ಪ್ರಕರಣದ ಮೇರೆಗಿನ ನೋಟೀಸಿಗೆ ಸಂವಾದಿಯಾಗಿರುವುದು | 7 |
| 24. | ಮಕ್ಕಳ ನಿಯೋಜನೆಯ ನಿಷೇಧ | 7 |
| 25. | ಕೆಲವು ಗಂಟೆಗಳ ಅವಧಿಯಲ್ಲಿ ಮಹಿಳೆಯರ ಅಥವಾ ಯುವಕರ ನಿಯೋಜನೆಗೆ ನಿಷೇಧ | 7 |
| 26. | ಮಜೂರಿ ಸಹಿತ ವಾರ್ಷಿಕ ರಜೆ | 7 |
| 27. | ರಜಾ ಅವಧಿಯಲ್ಲಿ ಮಜೂರಿಗಳು | 8 |
| 28. | ಕೈಗಾರಿಕಾ ಆವರಣಗಳಿಗೆ ಮಜೂರಿ ಸಂದಾಯ ಅಧಿನಿಯಮ, 1936ರ ಅನ್ವಯ | 9 |
| 29. | ವಿಶೇಷ ಉಪಬಂಧಗಳು | 9 |

30. ವಯಸ್ಸಿನ ಬಗ್ಗೆ ಹೊಣೆ 9

31. ವಜಾ ನೋಟೀಸು 9

32. ಇನ್ಸ್‌ಪೆಕ್ಟರನಿಗೆ ಅಡ್ಡಿಯುಂಟು ಮಾಡಿದ್ದಕ್ಕಾಗಿ ದಂಡ 10

33. ಅಪರಾಧಕ್ಕಾಗಿ ಸಾಮಾನ್ಯ ದಂಡ 10

34. ಕಂಪನಿಗಳಿಂದ ಅಪರಾಧಗಳು 10

35. ಸಂರಕ್ಷಣೆ 11

36. ಅಪರಾಧದ ಸಂಜ್ಞೇಯತೆ 11

37. ಕೈಗಾರಿಕಾ ನಿಯೋಜನಾ (ಸ್ಥಾಯೀ ಆದೇಶಗಳು) ಅಧಿನಿಯಮ, 1946 ಮತ್ತು ಪ್ರಸೂತಿ ಸೌಲಭ್ಯ ಅಧಿನಿಯಮ, 1961ರ ಅನ್ವಯ 11

38. ಕೆಲವು ಉಪಬಂಧಗಳು ಕೈಗಾರಿಕಾ ಆವರಣಗಳಿಗೆ ಅನ್ವಯಿಸದಿರುವುದು 12

39. ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ಅನ್ವಯ 12

40. ಈ ಅಧಿನಿಯಮಕ್ಕೆ ಅಸಂಗತವಾಗಿರುವ ಕಾನೂನುಗಳ ಮತ್ತು ಒಪ್ಪಂದಗಳ ಪರಿಣಾಮ 12

41. ವಿನಾಯಿತಿಗೊಳಿಸುವ ಅಧಿಕಾರ 12

42. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರಗಳು 13

43. ಖಾಸಗಿ ವಾಸದ ಮನೆಗಳಲ್ಲಿ ಸ್ವಯಂ ನಿಯೋಜಿತ ವ್ಯಕ್ತಿಗಳಿಗೆ ಅಧಿನಿಯಮವು ಅನ್ವಯವಾಗದಿರುವುದು 13

44. ನಿಯಮಗಳನ್ನು ರಚಿಸಲು ಅಧಿಕಾರ 13

## ಮುನ್ನುಡಿ

27.8.2003 ರಂದು ಜಾರಿಯಲ್ಲಿದ್ದಂತೆ ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966 ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 27.8.2003 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 27ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 36 ರಿಂದ 49 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ಟಿ.ಕೆ. ವಿಶ್ವನಾಥನ್
ಕಾರ್ಯದರ್ಶಿ,
ಭಾರತ ಸರ್ಕಾರ.

ನವದೆಹಲಿ

## PREFACE

This edition of the Beedi and Cigar Workers (Conditions of Employment) Act, 1966 as on the 27.8.2003 contains the authoritative text of that Act in Kannada which was published in the Gazette of India Extraordinary, Part IX, Section 1, No. 1, Volume 27, dated 27.8.2003 on pages 36 to 49.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

**T.K. Viswanathan**
Secretary,
Government of India.

New Delhi

# ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966

## (1966ರ ಅಧಿನಿಯಮ ಸಂಖ್ಯೆ 32)

[30ನೇ ನವಂಬರ್, 1966]

ಬೀಡಿ ಮತ್ತು ಸಿಗಾರ್ ಉದ್ಯಮ ಸಂಸ್ಥೆಗಳ ಕೆಲಸಗಾರರ ಕಲ್ಯಾಣಕ್ಕೆ ಮತ್ತು ಅವರ ಕೆಲಸದ ಸ್ಥಿತಿಗತಿಗಳ ವಿನಿಯಮನಕ್ಕೆ ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವ್ಯವಸ್ಥೆ ಮಾಡುವ ಅಧಿನಿಯಮ.

ಭಾರತ ಗಣರಾಜ್ಯದ ಹದಿನೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಒಂದು ರಾಜ್ಯದಲ್ಲಿ ಆ ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಬೇರೆ ಬೇರೆ ಪ್ರದೇಶಗಳ ಬಗ್ಗೆ ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳ ಬಗ್ಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) " ವಯಸ್ಕ" ಎಂದರೆ, ಹದಿನೆಂಟು ವರ್ಷ ವಯಸ್ಸು ತುಂಬಿರುವ ಒಬ್ಬ ವ್ಯಕ್ತಿ;

(ಬಿ) " ಮಗು" ಎಂದರೆ, ಹದಿನಾಲ್ಕು ವರ್ಷ ವಯಸ್ಸು ತುಂಬಿಲ್ಲದ ಒಬ್ಬ ವ್ಯಕ್ತಿ;

(ಸಿ) " ಸಕ್ಷಮ ಪ್ರಾಧಿಕಾರ" ಎಂದರೆ, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರದ ಎಲ್ಲ ಪ್ರಕಾರ್ಯಗಳನ್ನು ಅಥವಾ ಆ ಪೈಕಿ ಯಾವುದೇ ಒಂದು ಪ್ರಕಾರ್ಯವನ್ನು ನಿರ್ವಹಿಸಲು ಆ ರಾಜಪತ್ರದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳಿಗಾಗಿ ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ;

(ಡಿ) ತಯಾರಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ, " ಕರಾರುಗಾರ" ಎಂದರೆ, ಕರಾರು ಕಾರ್ಮಿಕರ ಮೂಲಕ ಕೆಲಸ ನಿರ್ವಹಿಸಿ ನಿರ್ದಿಷ್ಟ ಫಲಿತಾಂಶವನ್ನು ಸೃಷ್ಟಿಸುವುದಾಗಿ ಒಪ್ಪಿಕೊಳ್ಳುವ ಅಥವಾ ಖಾಸಗಿ ವಾಸದ ಮನೆಯಲ್ಲಿ ಯಾವುದೇ ತಯಾರಿಕಾ ಪ್ರಕ್ರಿಯೆಯಲ್ಲಿ ಕಾರ್ಮಿಕರನ್ನು ತೊಡಗಿಸುವ ಒಬ್ಬ ವ್ಯಕ್ತಿ, ಮತ್ತು ಅದರಲ್ಲಿ ಒಬ್ಬ ಉಪ ಕರಾರುಗಾರ, ಏಜೆಂಟ್, ಮೂನ್‌ಷಿ, ಠೇಕೆದಾರ ಅಥವಾ ಸತ್ತೇದಾರನು ಒಳಗೊಳ್ಳುತ್ತಾನೆ;

(ಇ) "ಕರಾರು ಕಾರ್ಮಿಕ " ಎಂದರೆ, ಯಾವುದೇ ತಯಾರಿಕಾ ಪ್ರಕ್ರಿಯೆಯಲ್ಲಿ ನಿಯೋಜಕನಿಗೆ ಗೊತ್ತಿದ್ದು ಅಥವಾ ಗೊತ್ತಿಲ್ಲದೇ ಒಬ್ಬ ಕರಾರುದಾರನಿಂದ ಅಥವಾ ಅವನ ಮೂಲಕ ಯಾವುದೇ ಆವರಣದಲ್ಲಿ ಕೆಲಸಕ್ಕೆ ತೊಡಗಿಸಲ್ಪಟ್ಟ ಅಥವಾ ನಿಯೋಜಿತನಾದ ಯಾವನೇ ವ್ಯಕ್ತಿ;

(ಎಫ್) "ನೌಕರ " ಎಂದರೆ, ಕುಶಲ, ಅಕುಶಲ, ದೈಹಿಕ ಅಥವಾ ಲಿಪಿಕ, ಈ ಯಾವುದೇ ಕೆಲಸವನ್ನು ಮಾಡಲು ಯಾವುದೇ ಕಾರ್ಯ ಸಂಸ್ಥೆಯಲ್ಲಿ ಅಥವಾ ಗೋದಾಮಿನಲ್ಲಿ ಮಜೂರಿಗಾಗಿಯಾಗಲಿ ಅಥವಾ ಮಜೂರಿಯಿಲ್ಲದೆಯೇ ಆಗಲಿ ನೇರವಾಗಿ ಅಥವಾ ಯಾವುದೇ ಏಜೆನ್ಸಿಯ ಮೂಲಕ ನಿಯೋಜಿತನಾದ ಒಬ್ಬ ವ್ಯಕ್ತಿ; ಮತ್ತು ಇದು -

(i) ಮನೆಯಲ್ಲಿ ಬೀಡಿ ಅಥವಾ ಸಿಗಾರ್ ಅಥವಾ ಇವೆರಡನ್ನೂ ತಯಾರಿಸುವುದಕ್ಕಾಗಿ ಯಾರೇ ಕಾರ್ಮಿಕ (ಇಲ್ಲಿ ಇನ್ನು ಮುಂದೆ "ಮನೆ ಕೆಲಸಗಾರ" ಎಂಬುದಾಗಿ ಈ ಅಧಿನಿಯಮದಲ್ಲಿ ಉಲ್ಲೇಖಿಸಲಾಗಿದೆ), ಮತ್ತು

(ii) ಒಬ್ಬ ನಿಯೋಜಕನಿಂದ ಅಥವಾ ಒಬ್ಬ ಗುತ್ತಿಗೆದಾರನಿಂದ ನಿಯೋಜಿತನಾಗಿರದ, ಆದರೆ ನಿಯೋಜಕನ ಅಥವಾ ಕರಾರುಗಾರನ ಅಥವಾ ಅವರಿಬ್ಬರ ಅನುಮತಿ ಪಡೆದು ಅಥವಾ ಅವನೊಡನೆ ಒಪ್ಪಂದದ ಮೇರೆಗೆ ಕೆಲಸ ಮಾಡುವ ಯಾರೇ ವ್ಯಕ್ತಿ;

- ಒಳಗೊಳ್ಳುತ್ತಾನೆ.

(ಜಿ) " ನಿಯೋಜಕ " ಎಂದರೆ, -

(ಎ) ಕರಾರು ಕಾರ್ಮಿಕನಿಗೆ ಸಂಬಂಧಿಸಿದಂತೆ ಮೂಲ ನಿಯೋಜಕ, ಮತ್ತು

(ಬಿ) ಇತರ ಕಾರ್ಮಿಕನ ಸಂಬಂಧದಲ್ಲಿ, ಯಾವುದೇ ಕಾರ್ಯ ಸಂಸ್ಥೆಯ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣವಿರುವ ಅಥವಾ ಹಣವನ್ನು ಮುಂಗಡವಾಗಿ ಕೊಡುವ ಅಥವಾ ಸರಕುಗಳನ್ನು ಸರಬರಾಜು ಮಾಡುವ ಅಥವಾ ಬೇರೆ ಕಾರಣದಿಂದ ಯಾವುದೇ ಕಾರ್ಯ ಸಂಸ್ಥೆಯ ವ್ಯವಹಾರಗಳ ನಿಯಂತ್ರಣದಲ್ಲಿ ಗಣನೀಯ ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿ ಮತ್ತು ಅದರಲ್ಲಿ ಕಾರ್ಯ ನಿರ್ವಹಣಾ

ಏಜೆಂಟ್, ವ್ಯವಸ್ಥಾಪಕ, ಸೂಪರಿಂಟೆಂಡೆಂಟ್ ಅಥವಾ ಇತರ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವ ಇತರ ವ್ಯಕ್ತಿಗೆ ಕಾರ್ಯ ಸಂಸ್ಥೆಯ ವ್ಯವಹಾರಗಳನ್ನು ವಹಿಸಿಕೊಡಲಾಗಿದೆಯೋ ಅಂಥ ಇತರ ಯಾರೇ ವ್ಯಕ್ತಿಯು ಒಳಗೊಳ್ಳುತ್ತಾನೆ;

(ಎಚ್) "ಕಾರ್ಯ ಸಂಸ್ಥೆ " ಎಂದರೆ, ಯಾವುದೇ ಸ್ಥಳ ಅಥವಾ ಆವರಣ ಮತ್ತು ಅವುಗಳ ಯಾವ ಒಳಾಂಗಣದಲ್ಲಿ ಅಥವಾ ಯಾವ ಭಾಗದಲ್ಲಿ, ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ತಯಾರಿಸುವುದಕ್ಕೆ ಸಂಬಂಧಿಸಿದ ಯಾವುದೇ ತಯಾರಿಕಾ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆಯೋ ಅಥವಾ ಸಾಮಾನ್ಯವಾಗಿ ನಡೆಸಲಾಗುವುದೋ ಆ ಒಳಾಂಗಣಗಳು ಅಥವಾ ಅವುಗಳ ಯಾವುದೇ ಭಾಗವು ಒಳಗೊಳ್ಳುತ್ತದೆ ಮತ್ತು ಅದರಲ್ಲಿ ಕೈಗಾರಿಕಾ ಆವರಣಗಳೂ ಸೇರುತ್ತವೆ;

(ಎಚ್‌ಎಚ್) " ಗೋದಾಮು " ಎಂದರೆ,-

(i) ಯಾವುದೇ ತಯಾರಿಕಾ ಪ್ರಕ್ರಿಯೆಗಾಗಿ ಬೇಕಾಗುವ ಯಾವುದೇ ವಸ್ತು ಅಥವಾ ಪದಾರ್ಥ; ಅಥವಾ

(ii) ಬೀಡಿ ಅಥವಾ ಸಿಗಾರ್ ಅಥವಾ ಅವೆರಡರ,

- ದಾಸ್ತಾನಿಗಾಗಿ ಉಪಯೋಗಿಸುವ ಯಾವುದೇ ಹೆಸರಿನಿಂದ ಕರೆಯಲಾಗುವ, ಯಾವುದೇ ಉಗ್ರಾಣ ಅಥವಾ ಇತರೆ ಸ್ಥಳ;

(ಐ) "ಕೈಗಾರಿಕಾ ಆವರಣಗಳು " ಎಂದರೆ, (ಖಾಸಗಿ ವಾಸದ ಮನೆಯಾಗಿಲ್ಲದ) ಯಾವುದೇ ಸ್ಥಳ ಅಥವಾ ಆವರಣಗಳು ಮತ್ತು ಅದರ ಯಾವ ಒಳಾಂಗಣದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ತಯಾರಿಸುವುದಕ್ಕೆ ಸಂಬಂಧಿಸಿದ ಯಾವುದೇ ಕೈಗಾರಿಕೆ ಅಥವಾ ತಯಾರಿಕಾ ಪ್ರಕ್ರಿಯೆಯನ್ನು ವಿದ್ಯುಚ್ಛಕ್ತಿಯ ಸಹಾಯವಿಲ್ಲದೆ ನಡೆಸಲಾಗುತ್ತಿದೆಯೋ ಅಥವಾ ಸಾಮಾನ್ಯವಾಗಿ ನಡೆಯುತ್ತಿದೆಯೋ ಆ ಒಳಾಂಗಣಗಳನ್ನು ಅಥವಾ ಅವುಗಳ ಭಾಗಗಳನ್ನು ಒಳಗೊಳ್ಳುತ್ತದೆ; ಮತ್ತು ಅದಕ್ಕೆ ಹೊಂದಿಕೊಂಡಿರುವ ಗೋದಾಮನ್ನೂ ಒಳಗೊಳ್ಳುತ್ತದೆ.

(ಜೆ) "ಇನ್ಸ್‌ಪೆಕ್ಟರ್" ಎಂದರೆ, 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಿಸಲ್ಪಟ್ಟ ಇನ್ಸ್‌ಪೆಕ್ಟರ್;

(ಕೆ) "ತಯಾರಿಕಾ ಪ್ರಕ್ರಿಯೆ" ಎಂದರೆ, ಯಾವುದೇ ವಸ್ತು ಅಥವಾ ಪದಾರ್ಥವನ್ನು ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ಉಪಯೋಗಿಸುವ, ಮಾರಾಟ ಮಾಡುವ, ಸಾಗಣೆ ಮಾಡುವ, ಬಟವಾಡೆ ಮಾಡುವ ಅಥವಾ ವಿಲೆ ಮಾಡುವ ದೃಷ್ಟಿಯಿಂದ ಅದನ್ನು ತಯಾರಿಸುವ, ಪೂರೈಸುವ ಅಥವಾ ಪ್ಯಾಕ್ ಮಾಡುವ ಅಥವಾ ಅನ್ಯಥಾ ಸಂಸ್ಕರಿಸುವ ಅಥವಾ ಅದಕ್ಕೆ ಪ್ರಾಸಂಗಿಕವಾಗಿರುವ ಯಾವುದೇ ಪ್ರಕ್ರಿಯೆ;

(ಎಲ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ಮೂಲ ನಿಯೋಜಕ " ಎಂದರೆ, ಯಾವ ವ್ಯಕ್ತಿಗಾಗಿ ಅಥವಾ ಯಾವ ವ್ಯಕ್ತಿಯ ಪರವಾಗಿ ಕರಾರು ಕಾರ್ಮಿಕನನ್ನು ಕಾರ್ಯ ಸಂಸ್ಥೆಯಲ್ಲಿ ಕೆಲಸಕ್ಕೆ ತೊಡಗಿಸಲಾಗಿದೆಯೋ ಅಥವಾ ನಿಯೋಜಿಸಲಾಗಿದೆಯೋ ಆ ಯಾವನೇ ವ್ಯಕ್ತಿ;

(ಎನ್) "ಖಾಸಗಿ ವಾಸದ ಮನೆ " ಎಂದರೆ, ಬೀಡಿ ಅಥವಾ ಸಿಗಾರ್ ಅಥವಾ ಇವೆರಡರ ತಯಾರಿಕೆಯಲ್ಲಿ ತೊಡಗಿರುವ ವ್ಯಕ್ತಿಗಳು ವಾಸಿಸುವ ಮನೆ;

(ಓ) ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿ "ರಾಜ್ಯ ಸರ್ಕಾರ " ಎಂದರೆ, ಅದರ ಆಡಳಿತಗಾರ;

(ಪಿ) "ವಾರ" ಎಂದರೆ, ಶನಿವಾರದ ಮಧ್ಯರಾತ್ರಿ ಪ್ರಾರಂಭವಾಗುವ ಏಳು ದಿನಗಳ ಅವಧಿ;

(ಕ್ಯೂ) "ಯುವಕ" ಎಂದರೆ, ಹದಿನಾಲ್ಕು ವರ್ಷ ತುಂಬಿರುವ ಆದರೆ ಹದಿನೆಂಟು ವರ್ಷ ತುಂಬಿಲ್ಲದ ವ್ಯಕ್ತಿ.

3. ಕೈಗಾರಿಕಾ ಆವರಣಗಳಿಗೆ ಲೈಸೆನ್ಸು ನೀಡುವುದು:- ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ನೀಡಲಾದ ಕಾನೂನು ಮಾನ್ಯ ಲೈಸೆನ್ಸನ್ನು ಯಾರೇ ನಿಯೋಜಕನು ಹೊಂದಿದ್ದ ಹೊರತು ಅವನು ಕೈಗಾರಿಕಾ ಆವರಣವಾಗಿ ಯಾವುದೇ ಸ್ಥಳ ಅಥವಾ ಆವರಣವನ್ನು ಅಂಥ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಹೊರತು ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗಿಸಲು ಅನುಮತಿ ನೀಡತಕ್ಕದ್ದಲ್ಲ.

4. ಲೈಸೆನ್ಸುಗಳು:- (1) ಕೈಗಾರಿಕಾ ಆವರಣವಾಗಿ ಯಾವುದೇ ಸ್ಥಳವನ್ನು ಅಥವಾ ಆವರಣವನ್ನು ಉಪಯೋಗಿಸಬಯಸುವ ಅಥವಾ ಉಪಯೋಗಿಸಲು ಅನುಮತಿ ನೀಡುವ ಯಾರೇ ವ್ಯಕ್ತಿಯು, ಅಂಥ ಆವರಣವನ್ನು ಕೈಗಾರಿಕಾ ಆವರಣವಾಗಿ ಉಪಯೋಗಿಸಲು ಅಥವಾ ಉಪಯೋಗಿಸುವುದಕ್ಕೆ ಅನುಮತಿ ನೀಡಲು ಲೈಸೆನ್ಸು ಕೋರಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಿ ಸಕ್ಷಮ ಪ್ರಾಧಿಕಾರಿಗೆ ಬರಹದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಅರ್ಜಿಯಲ್ಲಿ, ಆ ಸ್ಥಳ ಅಥವಾ ಆವರಣದಲ್ಲಿ ದಿನದ ಯಾವುದೇ ಸಮಯದಲ್ಲಿ ನಿಯೋಜಿಸಲು ಉದ್ದೇಶಿಸಿರುವ ನೌಕರರ ಗರಿಷ್ಠ ಸಂಖ್ಯೆಯನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ನಿಯಮಿಸಬಹುದಾದ ರೀತಿಯಲ್ಲಿ ತಯಾರಿಸಲಾದ ಆ ಸ್ಥಳದ ಅಥವಾ ಆವರಣದ ನಕ್ಷೆಯನ್ನು ಅದಕ್ಕೆ ಲಗತ್ತಿಸತಕ್ಕದ್ದು.

(3) ಸಕ್ಷಮ ಪ್ರಾಧಿಕಾರಿಯು, ಲೈಸೆನ್ಸನ್ನು ಮಂಜೂರು ಮಾಡಬೇಕೇ ಅಥವಾ ನಿರಾಕರಿಸಬೇಕೇ ಎಂಬುದನ್ನು ತೀರ್ಮಾನಿಸುವಲ್ಲಿ, ಈ ಕೆಳಕಂಡ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು:

(ಎ) ಬೀಡಿ ಅಥವಾ ಸಿಗಾರ್ ಅಥವಾ ಅವೆರಡರ ತಯಾರಿಕೆಗಾಗಿ ಉಪಯೋಗಿಸಲು ಉದ್ದೇಶಿಸಿರುವ ಸ್ಥಳದ ಅಥವಾ ಆವರಣದ ಸೂಕ್ತತೆ;

(ಬಿ) ಅರ್ಜಿದಾರನ ಈ ಹಿಂದಿನ ಅನುಭವ;

(ಸಿ) ಕಾರ್ಮಿಕ ಕಲ್ಯಾಣಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನುಗಳ ಉಪಬಂಧಗಳಿಂದ ಉದ್ಭವಿಸುವ ಬೇಡಿಕೆಗಳನ್ನು ಈಡೇರಿಸಲು ಅರ್ಜಿದಾರನ ಆರ್ಥಿಕ ಸಾಮರ್ಥ್ಯವೂ ಸೇರಿದಂತೆ ಅವನ ಆರ್ಥಿಕ ಸಂಪನ್ಮೂಲ;

(ಡಿ) ಅರ್ಜಿಯನ್ನು ಅರ್ಜಿದಾರನ ಪರವಾಗಿ ನಿಜವಾಗಿ ಸಲ್ಲಿಸಲಾಗಿದೆಯೇ ಅಥವಾ ಇತರ ಯಾರೇ ವ್ಯಕ್ತಿಯ ಹೆಸರಿನಲ್ಲಿ ಸಲ್ಲಿಸಲಾಗಿದೆಯೇ;

(ಇ) ಆ ಸ್ಥಳದಲ್ಲಿನ ಕಾರ್ಮಿಕರ ಕಲ್ಯಾಣ, ಸಾಮಾನ್ಯವಾಗಿ ಸಾರ್ವಜನಿಕರ ಹಿತಾಸಕ್ತಿ ಮತ್ತು ನಿಯಮಿಸಬಹುದಾದಂಥ ಇತರ ವಿಷಯಗಳು;

(4) (ಎ) ಈ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸು, ಅದನ್ನು ಯಾವ ಹಣಕಾಸು ವರ್ಷದಲ್ಲಿ ನೀಡಲಾಗಿದೆಯೋ ಆ ವರ್ಷದಾಚೆಗೆ ಕಾನೂನು ಮಾನ್ಯವಾಗತಕ್ಕದ್ದಲ್ಲ, ಆದರೆ ಅದನ್ನು ಒಂದು ಹಣಕಾಸು ವರ್ಷದಿಂದ ಇನ್ನೊಂದು ಹಣಕಾಸು ವರ್ಷಕ್ಕೆ ನವೀಕರಿಸುತ್ತ ಹೋಗಬಹುದು.

(ಬಿ) ಈ ಅಧಿನಿಯಮದ ಮೇರೆಗೆ ನೀಡಲಾದ ಲೈಸೆನ್ಸಿನ ನವೀಕರಣಕ್ಕೆ ಸಲ್ಲಿಸುವ ಅರ್ಜಿಯನ್ನು, ಅದರ ಅವಧಿಯು ಮುಗಿಯುವುದಕ್ಕೆ ಕನಿಷ್ಠಪಕ್ಷ ಮೂವತ್ತು ದಿನಗಳ ಮುಂಚೆ, ನಿಯಮಿಸಬಹುದಾದ ಶುಲ್ಕಗಳನ್ನು ಪಾವತಿ ಮಾಡಿ ಸಲ್ಲಿಸತಕ್ಕದ್ದು, ಮತ್ತು ಅಂಥ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಲೈಸೆನ್ಸಿನ ಅವಧಿಯು ಮುಕ್ತಾಯವಾಗಿದ್ದರೂ ಲೈಸೆನ್ಸನ್ನು ನವೀಕರಿಸುವತನಕ ಅಥವಾ ಸಂದರ್ಭಾನುಸಾರ ಅದರ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವ ತನಕ ಅದು ಮುಂದುವರಿದಿರುವುದಾಗಿ ಭಾವಿಸತಕ್ಕದ್ದು.

(ಸಿ) ಸಕ್ಷಮ ಪ್ರಾಧಿಕಾರವು, ಲೈಸೆನ್ಸನ್ನು ನವೀಕರಿಸಬೇಕೇ ಅಥವಾ ಅದರ ನವೀಕರಣವನ್ನು ತಿರಸ್ಕರಿಸಬೇಕೆ ಎಂಬುದನ್ನು ತೀರ್ಮಾನಿಸುವಾಗ, (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

(5) ಸಕ್ಷಮ ಪ್ರಾಧಿಕಾರಕ್ಕೆ, ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಬಹುಮಟ್ಟಿಗೆ ಪಾಲಿಸಲಾಗಿದೆ ಎಂಬುದು ಮನವರಿಕೆಯಾದ ಹೊರತು ಅದು ಲೈಸೆನ್ಸನ್ನು ನೀಡತಕ್ಕದ್ದಲ್ಲ ಅಥವಾ ನವೀಕರಿಸತಕ್ಕದ್ದಲ್ಲ.

(6) ಅಂಥ ಲೈಸೆನ್ಸನ್ನು ತಪ್ಪು ನಿರೂಪಣೆಯಿಂದ ಅಥವಾ ಮೋಸದಿಂದ ಪಡೆಯಲಾಗಿದೆಯೆಂದು ಅಥವಾ ಲೈಸೆನ್ಸುದಾರನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ಯಾವುವೇ ನಿಯಮಗಳ ಉಪಬಂಧಗಳನ್ನು ಅಥವಾ ಲೈಸೆನ್ಸಿನ ನಿಬಂಧನೆಗಳ ಅಥವಾ ಷರತ್ತುಗಳ ಪೈಕಿ ಯಾವುದನ್ನಾದರೂ ಉಲ್ಲಂಘಿಸಿದ್ದಾನೆಂದು ಅಥವಾ ಪರಿಪಾಲಿಸಿಲ್ಲವೆಂದು ಸಕ್ಷಮ ಪ್ರಾಧಿಕಾರಕ್ಕೆ ಕಂಡುಬಂದರೆ, ಅದು, ಅಹವಾಲನ್ನು ಹೇಳಿಕೊಳ್ಳಲು ಲೈಸೆನ್ಸುದಾರನಿಗೆ ಯುಕ್ತ ಅವಕಾಶ ಕೊಟ್ಟ ತರುವಾಯ ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನವೀಕರಿಸಲಾದ ಯಾವುದೇ ಲೈಸೆನ್ಸನ್ನು ರದ್ದುಗೊಳಿಸಬಹುದು ಅಥವಾ ಅಮಾನತ್ತುಗೊಳಿಸಬಹುದು.

(7) ರಾಜ್ಯ ಸರ್ಕಾರವು, ಈ ಪ್ರಕರಣದ ಮೇರೆಗೆ ಲೈಸೆನ್ಸುಗಳನ್ನು ನೀಡುವುದಕ್ಕೆ ಅಥವಾ ನವೀಕರಿಸುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ತಾನು ಅವಶ್ಯಕವೆಂದು ಭಾವಿಸಬಹುದಾದಂಥ ಸಾಮಾನ್ಯ ಸ್ವರೂಪದ ನಿರ್ದೇಶನಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಲಿಖಿತದಲ್ಲಿ ನೀಡಬಹುದು.

(8) ಈ ಪ್ರಕರಣದ ಈ ಹಿಂದಿನ ಉಪಬಂಧಗಳಿಗೆ ಒಳಪಟ್ಟು, ಸಕ್ಷಮ ಪ್ರಾಧಿಕಾರವು, ಅದು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಈ ಅಧಿನಿಯಮದ ಮೇರೆಗೆ ಲೈಸೆನ್ಸುಗಳನ್ನು ನೀಡಬಹುದು ಅಥವಾ ನವೀಕರಿಸಬಹುದು ಮತ್ತು ಸಕ್ಷಮ ಪ್ರಾಧಿಕಾರವು ಯಾವುದೇ ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವಲ್ಲಿ ಅದು ಅಂಥ ನಿರಾಕರಣೆಗೆ ಲಿಖಿತ ಕಾರಣ ನೀಡಿ ಅರ್ಜಿದಾರನಿಗೆ ಆದೇಶದ ಮೂಲಕ ತಿಳಿಸಿ ಹಾಗೆ ಮಾಡಬಹುದು.

5. ಅಪೀಲುಗಳು:- ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವ ಅಥವಾ ಲೈಸೆನ್ಸನ್ನು ರದ್ದುಗೊಳಿಸುವ ಅಥವಾ ಅಮಾನತುಗೊಳಿಸುವ ಸಕ್ಷಮ ಪ್ರಾಧಿಕಾರದ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ಸಮಯದೊಳಗೆ ಮತ್ತು ಇಪ್ಪತ್ತು ರೂಪಾಯಿಗಳನ್ನು ಮೀರದಂಥ ಶುಲ್ಕವನ್ನು ಸಂದಾಯ ಮಾಡಿ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಪ್ರಾಧಿಕಾರವು, ಆದೇಶದ ಮೂಲಕ, ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವ ಅಥವಾ ಲೈಸೆನ್ಸನ್ನು ರದ್ದುಗೊಳಿಸುವ ಅಥವಾ ಅಮಾನತುಗೊಳಿಸುವ ಯಾವುದೇ ಆದೇಶವನ್ನು ಸ್ಥಿರೀಕರಿಸಬಹುದು ಅಥವಾ ಮಾರ್ಪಾಟುಗೊಳಿಸಬಹುದು ಅಥವಾ ವಾಪಸು ತೆಗೆದುಕೊಳ್ಳಬಹುದು.

6. ಇನ್ಸ್‌ಪೆಕ್ಟರ್:- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಇನ್ಸ್‌ಪೆಕ್ಟರಾಗಿರಲು ತಾನು ಯುಕ್ತವೆಂದು ಭಾವಿಸುವಂಥ ತನ್ನ ಅಧಿಕಾರಿಗಳನ್ನು ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಗಳನ್ನು ನೇಮಿಸಬಹುದು ಮತ್ತು ತಾನು ಯುಕ್ತವೆಂದು ಭಾವಿಸಬಹುದಾದಂಥ ಸ್ಥಳೀಯ ಪರಿಮಿತಿಗಳನ್ನು ಅವರಿಗೆ ವಹಿಸಿಕೊಡಬಹುದು.

(2) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ರಾಜ್ಯಾದ್ಯಂತ ಇನ್ಸ್‌ಪೆಕ್ಟರ್‌ನ ಅಧಿಕಾರಗಳನ್ನು ಚಲಾಯಿಸತಕ್ಕ ಚೀಫ್ ಇನ್ಸ್‌ಪೆಕ್ಟರನಾಗಿರಲು ಯಾರೇ ವ್ಯಕ್ತಿಯನ್ನು ನೇಮಿಸಬಹುದು.

(3) ಪ್ರತಿಯೊಬ್ಬ ಚೀಫ್ ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರನು ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದು.

7. ಇನ್ಸ್‌ಪೆಕ್ಟರ್‌ನ ಅಧಿಕಾರಗಳು:- (1) ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮಗಳಿಗೊಳಪಟ್ಟು, ಇನ್ಸ್‌ಪೆಕ್ಟರನು, ಯಾವ ಸ್ಥಳೀಯ ಪರಿಮಿತಿಗಳಿಗೆ ಅವನನ್ನು ನೇಮಿಸಲಾಗಿದೆಯೋ ಆ ಪರಿಮಿತಿಗಳಲ್ಲಿ,-

(ಎ) ಈ ಅಧಿನಿಯಮದ ಉಪಬಂಧಗಳನ್ನು ಯಾವುದೇ ಸ್ಥಳದಲ್ಲಿ ಅಥವಾ ಆವರಣಗಳಲ್ಲಿ ಪಾಲಿಸಲಾಗಿದೆಯೇ ಅಥವಾ ಪಾಲಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವಶ್ಯಕವಾಗಬಹುದಾದಂಥ ಪರೀಕ್ಷೆಯನ್ನು ಮಾಡಬಹುದು ಮತ್ತು ಅಂಥ ವಿಚಾರಣೆಯನ್ನು ನಡೆಸಬಹುದು:

ಪರಂತು, ಯಾರೇ ವ್ಯಕ್ತಿಯನ್ನು, ಅವನನ್ನು ಅಪರಾಧದಲ್ಲಿ ಸಿಕ್ಕಿಸಬಹುದಾದಂಥ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ಸಾಕ್ಷ್ಯವನ್ನು ಕೊಡಲು ಈ ಪ್ರಕರಣದ ಮೇರೆಗೆ ಒತ್ತಾಯಪಡಿಸತಕ್ಕದ್ದಲ್ಲ;

(ಬಿ) ಬೀಡಿ ಅಥವಾ ಸಿಗಾರ್ ಅಥವಾ ಇವೆರಡರ ತಯಾರಿಕೆಗೆ ಸಂಬಂಧಿಸಿದ ಯಾವುದೇ ನಿಯಮಿಸಿದ ರಿಜಿಸ್ಟರನ್ನು ಮತ್ತು ಇತರ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು;

(ಸಿ) ಯಾವುದೇ ಸ್ಥಳದಲ್ಲಿ ಅಥವಾ ಆವರಣಗಳಲ್ಲಿ ಯಾವುದೇ ತಯಾರಿಕಾ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆಯೆಂದು ಅಥವಾ ಸಾಮಾನ್ಯವಾಗಿ ನಡೆಸಲಾಗುತ್ತಿದೆಯೆಂದು ಸಂದೇಹಪಡುವುದಕ್ಕೆ ಅವನಿಗೆ ಯುಕ್ತ ಕಾರಣಗಳು ಕಂಡುಬಂದರೆ, ಕೆಲಸಗಾರರ ನಿವಾಸ ಸ್ಥಳಗಳೂ ಸೇರಿದಂತೆ ಯಾವುದೇ ಸ್ಥಳಕ್ಕೆ ಅಥವಾ ಆವರಣಗಳಿಗೆ ಎಲ್ಲಾ ಸಮಯಗಳಲ್ಲಿ ತಾನು ಯುಕ್ತವೆಂದು ಭಾವಿಸುವಂಥ ಸಹಾಯಕರ ಜೊತೆ ಪ್ರವೇಶಿಸಬಹುದು;

(ಡಿ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(2) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಕಾರ್ಯ ಸಂಸ್ಥೆಯಲ್ಲಿ ಯಾವುದೇ ತಯಾರಿಕಾ ಪ್ರಕ್ರಿಯೆ ನಡೆಸಲಾಗುತ್ತಿದೆಯೆಂದು ಸಂದೇಹಪಡಲು ಇನ್ಸ್‌ಪೆಕ್ಟರನಿಗೆ ಯುಕ್ತ ಕಾರಣಗಳು ಕಂಡುಬಂದರೆ, ಅವನು ನಿಯೋಜಕನಿಗೆ ಅಥವಾ ಅವನ ಗೈರುಹಾಜರಿಯಲ್ಲಿ ಅಧಿಭೋಗದಾರನಿಗೆ ಯುಕ್ತ ನೋಟೀಸನ್ನು ಕೊಟ್ಟ ತರುವಾಯ, ಅವನು ಯುಕ್ತವೆಂದು ಭಾವಿಸುವಂಥ ಸಹಾಯಕರು ಯಾರಾದರೂ ಇದ್ದರೆ ಅವರ ಜೊತೆ ಅಂಥ ಕಾರ್ಯ ಸಂಸ್ಥೆಯನ್ನು ಪ್ರವೇಶಿಸಬಹುದು;

(3) ಪ್ರತಿಯೊಬ್ಬ ನಿಯೋಜಕನು ಅಥವಾ ಅಧಿಭೋಗದಾರನು, ಸಂದರ್ಭಾನುಸಾರ ಮುಖ್ಯ ಇನ್ಸ್‌ಪೆಕ್ಟರನಿಗೆ ಅಥವಾ ಇನ್ಸ್‌ಪೆಕ್ಟರನಿಗೆ ಈ ಅಧಿನಿಯಮದ ಮೇರೆಗೆ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಎಲ್ಲಾ ಯುಕ್ತ ಸೌಲಭ್ಯಗಳನ್ನು ಒದಗಿಸಿಕೊಡತಕ್ಕದ್ದು.

7ಎ. ಇನ್ಸ್‌ಪೆಕ್ಟರು ಯಾವುದೇ ದೂರು, ಇತ್ಯಾದಿಗಳ ಮೂಲವನ್ನು ಬಹಿರಂಗ ಪಡಿಸಬಾರದು:- (1) ಯಾವ ಇನ್ಸ್‌ಪೆಕ್ಟರ್ ಈ ಅಧಿನಿಯಮದ ಯಾವುದೇ ಉಪಬಂಧಗಳ ಉಲ್ಲಂಘನೆಯ ಬಗ್ಗೆ ತನಗೆ ಬರುವ ಯಾವುದೇ ದೂರಿನ ಮೂಲವನ್ನು ಬಹಿರಂಗಪಡಿಸತಕ್ಕದ್ದಲ್ಲ.

(2) ಯಾವ ಇನ್ಸ್‌ಪೆಕ್ಟರು ತಾನು ಸ್ವೀಕರಿಸಿದ ದೂರಿನ ಅನುಸಾರವಾಗಿ ಈ ಅಧಿನಿಯಮದ ಮೇರೆಗೆ ಪರಿಶೀಲನೆ ನಡೆಸುವಾಗ, ಅಂಥ ಪರಿಶೀಲನೆಯನ್ನು ದೂರಿನ ಅನುಸಾರವಾಗಿ ನಡೆಸಲಾಗುತ್ತಿದೆಯೆಂದು ನಿಯೋಜಕನಿಗಾಗಲಿ ಅಥವಾ ಸಂಬಂಧಪಟ್ಟ ಕರಾರುದಾರನಿಗಾಗಲಿ ಅಥವಾ ಆತನ ಯಾರೇ ಪ್ರತಿನಿಧಿಗಳಿಗಾಗಲಿ ಬಹಿರಂಗಪಡಿಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿ ಇರುವುದಾವುದೂ ದೂರನ್ನು ನೀಡಿರುವ ವ್ಯಕ್ತಿಯು ತನ್ನ ಹೆಸರನ್ನು ಬಹಿರಂಗಪಡಿಸಲು ಸಮ್ಮತಿಸಿದ ಯಾವುದೇ ಪ್ರಕರಣಕ್ಕೆ ಅನ್ವಯಿಸತಕ್ಕದ್ದಲ್ಲ.

8. ಸ್ವಚ್ಛತೆ:- ಪ್ರತಿಯೊಂದು ಕೈಗಾರಿಕಾ ಆವರಣವನ್ನು, ಸ್ವಚ್ಛವಾಗಿ ಮತ್ತು ಯಾವುದೇ ಚರಂಡಿ, ಕಕ್ಕಸು ಅಥವಾ ಇತರ ಹೇಸಿಕೆಯಿಂದ ಮುಕ್ತವಾಗಿಡತಕ್ಕದ್ದು ಮತ್ತು ನಿಯಮಿಸಬಹುದಾದಂತೆ ಸುಣ್ಣ ಹೊಡೆಯುವುದು, ಬಣ್ಣ ಹೊಡೆಯುವುದು, ವಾರ್ನಿಷ್ ಹೊಡೆಯುವುದು, ಪೆಯಿಂಟ್ ಮಾಡುವುದೂ ಸೇರಿದಂತೆ ಸ್ವಚ್ಛತೆಯ ಮಟ್ಟವನ್ನೂ ಸಹ ಕಾಪಾಡಿಕೊಳ್ಳತಕ್ಕದ್ದು.

9. ಗಾಳಿ- ಬೆಳಕು:- (1) ಕೈಗಾರಿಕಾ ಆವರಣಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಆರೋಗ್ಯಕ್ಕೆ ಕ್ಷತಿಯುಂಟಾಗುವುದನ್ನು ನಿವಾರಿಸುವ ಉದ್ದೇಶಕ್ಕಾಗಿ, ಆ ಪ್ರತಿಯೊಂದು ಕೈಗಾರಿಕಾ ಆವರಣಗಳಲ್ಲಿ ನಿಯಮಿಸಬಹುದಾದಂತೆ ದೀಪದ ವ್ಯವಸ್ಥೆ, ಬೆಳಕು, ಗಾಳಿ ಮತ್ತು ಶಾಖದ ವ್ಯವಸ್ಥೆಯ ಮಟ್ಟಗಳನ್ನು ಕಾಪಾಡಿಕೊಳ್ಳತಕ್ಕದ್ದು.

(2) ಯಾವುದೇ ಕೈಗಾರಿಕಾ ಆವರಣಗಳಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ಕ್ಷತಿಯುಂಟಾಗುವ ಸಂಭವವಿರುವಂಥ ಮತ್ತು ನೋಯಿಸುವಂಥ ಸ್ವರೂಪದ ಮತ್ತು ಅಷ್ಟರಮಟ್ಟಿಗೆ ಧೂಳು ಅಥವಾ ಹೊಗೆ ಅಥವಾ ಇತರ ಮಾಲಿನ್ಯವು ಅಂಥ ಆವರಣಗಳಲ್ಲಿ ನಡೆಯುತ್ತಿರುವ ತಯಾರಿಕಾ ಪ್ರಕ್ರಿಯೆಗಳ ಕಾರಣದಿಂದ ಹೊರಸೂಸುತ್ತಿದ್ದಲ್ಲಿ, ಸಕ್ಷಮ ಪ್ರಾಧಿಕಾರವು, ಯಾವುದೇ ಕೆಲಸದ ಕೊಠಡಿಯಲ್ಲಿ ಅಂಥ ಧೂಳು, ಹೊಗೆ ಅಥವಾ ಇತರ ಮಾಲಿನ್ಯ ಮತ್ತು ಅದರ ದಟ್ಟಣೆಯನ್ನು ಉಸಿರಾಟದೊಳಗೆ ತೆಗೆದುಕೊಳ್ಳುವುದನ್ನು ಪ್ರತಿಬಂಧಿಸಬಹುದಾದಂಥ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಿಯೋಜಕನನ್ನು ಅಗತ್ಯಪಡಿಸಬಹುದು.

10. ಜನದಟ್ಟಣೆ:- (1) ಯಾವುದೇ ಕೈಗಾರಿಕಾ ಆವರಣದಲ್ಲಿ ನಿಯೋಜಿತರಾದ ವ್ಯಕ್ತಿಗಳ ಆರೋಗ್ಯಕ್ಕೆ ಕ್ಷತಿಯಾಗುವಷ್ಟರಮಟ್ಟಿಗೆ ಅದರಲ್ಲಿನ ಯಾವುದೇ ಕೊಠಡಿಯಲ್ಲಿ ಜನದಟ್ಟಣೆ ಇರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ಆವರಣದ ಯಾವುದೇ ಕೆಲಸದ ಕೊಠಡಿಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ವ್ಯಕ್ತಿಗೆ ಕನಿಷ್ಠ ಪಕ್ಷ ನಾಲ್ಕೂ ಕಾಲು ಘನ ಮೀಟರುಗಳ ಸ್ಥಳ ಇರತಕ್ಕದ್ದು, ಮತ್ತು ಈ ಉಪಪ್ರಕರಣಗಳ ಉದ್ದೇಶಗಳಿಗಾಗಿ, ಕೆಲಸದ ಕೊಠಡಿಯ ಅಂತಸ್ತಿನ ಮಟ್ಟದಿಂದ ಮೂರು ಮೀಟರುಗಳು ಮೀರಿರುವ ಯಾವುದೇ ಸ್ಥಳವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

11. ಕುಡಿಯುವ ನೀರು:- (1) ನಿಯೋಜಕನು, ಕೈಗಾರಿಕಾ ಆವರಣದಲ್ಲಿ ಕೆಲಸ ಮಾಡುವ ಎಲ್ಲಾ ವ್ಯಕ್ತಿಗಳಿಗೆ ಅನುಕೂಲಕರವಾಗಿರುವ ಸೂಕ್ತ ಸ್ಥಳದಲ್ಲಿ ಆರೋಗ್ಯಕರವಾದ ಕುಡಿಯುವ ನೀರನ್ನು ಸಾಕಷ್ಟು ಸರಬರಾಜು ಮಾಡಲು ಮತ್ತು ನಿರ್ವಹಿಸಲು ಪರಿಣಾಮಕಾರಿ ವ್ಯವಸ್ಥೆಗಳನ್ನು ಅಂಥ ಪ್ರತಿಯೊಂದು ಕೈಗಾರಿಕಾ ಆವರಣದಲ್ಲಿ ಮಾಡತಕ್ಕದ್ದು.

(2) ಅಂಥ ಎಲ್ಲಾ ಸ್ಥಳಗಳನ್ನು, ಆ ಕೈಗಾರಿಕಾ ಆವರಣದಲ್ಲಿ ಕೆಲಸ ಮಾಡುತ್ತಿರುವ ಬಹುಸಂಖ್ಯಾತ ವ್ಯಕ್ತಿಗಳಿಗೆ ತಿಳಿಯುವ ಭಾಷೆಯಲ್ಲಿ " ಕುಡಿಯುವ ನೀರು" ಎಂಬುದಾಗಿ ಸ್ಪುಟವಾಗಿ ಬರೆದಿಡತಕ್ಕದ್ದು ಮತ್ತು ಅಂಥ ಸ್ಥಳವು, ಸಕ್ಷಮ ಪ್ರಾಧಿಕಾರಿಯ ಲಿಖಿತ ಪೂರ್ವಾನುಮೋದನೆಯೊಂದಿಗೆ ಹೊರತು, ಯಾವುದೇ ತೊಳೆಯುವ ಸ್ಥಳ, ಮೂತ್ರಾಲಯ ಅಥವಾ ಕಕ್ಕಸ್ಸಿಗೆ ಆರು ಮೀಟರುಗಳ ಅಂತರದೊಳಗೆ ಇರತಕ್ಕದ್ದಲ್ಲ.

12. ಕಕ್ಕಸುಗಳು ಮತ್ತು ಮೂತ್ರಿಗಳು:- (1) ಪ್ರತಿಯೊಂದು ಕೈಗಾರಿಕಾ ಆವರಣದಲ್ಲಿ ನಿಯಮಿಸಬಹುದಾದಂಥ ಮಾದರಿಗಳ ಸಾಕಷ್ಟು ಸಂಖ್ಯೆಯ ಕಕ್ಕಸು ಮತ್ತು ಮೂತ್ರಿಗಳಿಗಾಗಿ ಸ್ಥಳಾವಕಾಶವನ್ನು ಒದಗಿಸತಕ್ಕದ್ದು ಮತ್ತು ಅವು ಕೈಗಾರಿಕಾ ಆವರಣದಲ್ಲಿ ನೌಕರರು ಇರುವ ಎಲ್ಲಾ ಸಮಯಗಳಲ್ಲಿ ಅವರಿಗೆ ಹೋಗಿಬರಲು ಅನುಕೂಲವಾಗುವಂತೆ ಇರತಕ್ಕದ್ದು:

ಪರಂತು, ಐವತ್ತಕ್ಕಿಂತ ಕಡಿಮೆ ಜನರು ಕೆಲಸ ಮಾಡುವ ಕೈಗಾರಿಕಾ ಆವರಣದಲ್ಲಿ ಅಥವಾ ಕಕ್ಕಸುಗಳನ್ನು ನೀರಿನ ಮೂಲಕ ಹಾದುಹೋಗುವ ಚರಂಡಿ ವ್ಯವಸ್ಥೆಗೆ ಜೋಡಿಸಿರುವಲ್ಲಿ, ಪ್ರತ್ಯೇಕ ಮೂತ್ರಾಲಯಗಳನ್ನು ಒದಗಿಸುವ ಅಗತ್ಯವಿಲ್ಲ.

(2) ರಾಜ್ಯ ಸರ್ಕಾರವು, ಯಾವುದೇ ಕೈಗಾರಿಕಾ ಆವರಣದಲ್ಲಿ ಸಾಮಾನ್ಯವಾಗಿ ಕೆಲಸ ಮಾಡುತ್ತಿರುವ ಪುರುಷರ ಮತ್ತು ಮಹಿಳೆಯರ ಸಂಖ್ಯೆಯ ಪ್ರಮಾಣಾನುಸಾರವಾಗಿ ಅಲ್ಲಿ ಒದಗಿಸತಕ್ಕ ಕಕ್ಕಸುಗಳ ಮತ್ತು ಮೂತ್ರಿಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸಬಹುದು ಮತ್ತು ಕೈಗಾರಿಕಾ ಆವರಣದಲ್ಲಿ ನಿಯೋಜಿತರಾದ ವ್ಯಕ್ತಿಗಳ ಆರೋಗ್ಯದ ಹಿತದೃಷ್ಟಿಯಿಂದ ತಾನು ಅವಶ್ಯಕವೆಂದು ಪರಿಗಣಿಸಬಹುದಾದಂತೆ ಕೈಗಾರಿಕಾ ಆವರಣದ ನೈರ್ಮಲ್ಯಕ್ಕೆ ಸಂಬಂಧಿಸಿ ನಿಯೋಜಿತರ ಬಾಧ್ಯತೆಯೂ ಸೇರಿದಂತೆ, ಆ ಸಂಬಂಧದಲ್ಲಿ ಅಂಥ ಹೆಚ್ಚಿನ ವಿಷಯಗಳ ಬಗ್ಗೆ ಉಪಬಂಧಿಸಬಹುದು.

13. ತೊಳೆಯುವ ಸೌಕರ್ಯಗಳು:- ಹೊಗೆಸೊಪ್ಪನ್ನು ಮಿಶ್ರ ಮಾಡುವ ಅಥವಾ ಜರಡಿ ಹಿಡಿಯುವ ಅಥವಾ ಅವೆರಡನ್ನೂ ಮಾಡುವ ಅಥವಾ ಬಿಸಿ ಒಲೆಗಳಲ್ಲಿ ಬೀಡಿಯನ್ನು ಬೆಚ್ಚಗೆ ಮಾಡುವ ಕೆಲಸವು ನಡೆಯುವಂಥ ಪ್ರತಿಯೊಂದು ಕೈಗಾರಿಕಾ ಆವರಣದಲ್ಲಿ, ನೌಕರರ ಉಪಯೋಗಕ್ಕಾಗಿ, ನಿಯಮಿಸಬಹುದಾದಂತೆ ತೊಳೆಯುವ ಸೌಲಭ್ಯಗಳನ್ನು ನಿಯೋಜಕನು ಒದಗಿಸತಕ್ಕದ್ದು.

14. ಮಕ್ಕಳ ಪಾಲನಾ ಗೃಹಗಳು:- (1) ಮೂವತ್ತಕ್ಕಿಂತ ಹೆಚ್ಚು ಮಹಿಳಾ ನೌಕರರು ಸಾಮಾನ್ಯವಾಗಿ ನಿಯೋಜಿತವಾಗಿರುವ ಪ್ರತಿಯೊಂದು ಕೈಗಾರಿಕಾ ಆವರಣದಲ್ಲಿ, ಅಂಥ ಮಹಿಳಾ ನೌಕರರ ಆರು ವರ್ಷಗಳೊಳಗಿನ ಮಕ್ಕಳ ಉಪಯೋಗಕ್ಕಾಗಿ ಸೂಕ್ತ ಕೊಠಡಿ ಅಥವಾ ಕೊಠಡಿಗಳನ್ನು ಒದಗಿಸತಕ್ಕದ್ದು ಮತ್ತು ಅವುಗಳನ್ನು ನಿರ್ವಹಿಸಿಕೊಂಡು ಬರತಕ್ಕದ್ದು.

(2) ಅಂಥ ಕೊಠಡಿಗಳಲ್ಲಿ -

(ಎ) ಸಾಕಷ್ಟು ಸ್ಥಳಾವಕಾಶವನ್ನು ಒದಗಿಸಿರತಕ್ಕದ್ದು;

(ಬಿ) ಸಾಕಷ್ಟು ದೀಪದ ಮತ್ತು ಗಾಳಿ ಬೆಳಕಿನ ವ್ಯವಸ್ಥೆ ಇರತಕ್ಕದ್ದು;

(ಸಿ) ಸ್ವಚ್ಛ ಮತ್ತು ನಿರ್ಮಲವಾದ ವ್ಯವಸ್ಥೆ ಇರತಕ್ಕದ್ದು;

(ಡಿ) ಮಕ್ಕಳು ಮತ್ತು ಶಿಶುಗಳ ಪಾಲನೆಯಲ್ಲಿ ತರಬೇತಿ ಹೊಂದಿದ ಮಹಿಳೆಯರ ಪ್ರಭಾರವಿರತಕ್ಕದ್ದು.

(3) ರಾಜ್ಯ ಸರ್ಕಾರವು,-

(ಎ) ಈ ಪ್ರಕರಣದ ಮೇರೆಗೆ ಒದಗಿಸಬೇಕಾದ ಕೊಠಡಿಗಳ ಸ್ಥಳ ನಿರ್ದೇಶ ಮತ್ತು ನಿರ್ಮಾಣ, ಸ್ಥಳಾವಕಾಶ, ಪೀಠೋಪಕರಣ ಮತ್ತು ಇತರ ಸಜ್ಜು ಸಲಕರಣೆಗಳಿಗೆ ಸಂಬಂಧಿಸಿದ ಗುಣಮಟ್ಟವನ್ನು ನಿಯಮಿಸುವ;

(ಬಿ) ಈ ಪ್ರಕರಣವು ಅನ್ವಯವಾಗುವ ಯಾವುದೇ ಕೈಗಾರಿಕಾ ಆವರಣದಲ್ಲಿ ಮಹಿಳಾ ನೌಕರರಿಗೆ ಸೇರಿದ ಮಕ್ಕಳ ಪಾಲನೆಗಾಗಿ ಹೆಚ್ಚಿನ ಸೌಲಭ್ಯಗಳನ್ನು ಮತ್ತು ಆ ಮಕ್ಕಳ ಬಟ್ಟೆಬರೆಗಳನ್ನು ಒಗೆಯುವ ಹಾಗೂ ಬದಲಾಯಿಸುವ ಬಗ್ಗೆ ಸೂಕ್ತ ಸೌಕರ್ಯಗಳನ್ನು ಒದಗಿಸುವಂತೆ ಅಗತ್ಯಪಡಿಸುವ;

(ಸಿ) ಯಾವುದೇ ಕೈಗಾರಿಕಾ ಆವರಣದಲ್ಲಿ ಅಂಥ ಮಕ್ಕಳಿಗಾಗಿ ಉಚಿತ ಹಾಲು ಅಥವಾ ಉಪಹಾರ ಅಥವಾ ಅವೆರಡನ್ನೂ ಒದಗಿಸುವಂತೆ ಅಗತ್ಯಪಡಿಸುವ;

(ಡಿ) ಯಾವುದೇ ಕೈಗಾರಿಕಾ ಆವರಣದಲ್ಲಿ, ಅಂಥ ಮಕ್ಕಳ ತಾಯಂದಿರಿಗೆ ಅಗತ್ಯ ಮಧ್ಯಂತರಗಳಲ್ಲಿ ಮಕ್ಕಳಿಗೆ ಆಹಾರವನ್ನು ಕೊಡಲು ಸೌಲಭ್ಯಗಳನ್ನು ಕೊಡುವಂತೆ ಅಗತ್ಯಪಡಿಸುವ

- ನಿಯಮಗಳನ್ನು ರಚಿಸಬಹುದು.

15. ಪ್ರಥಮ ಚಿಕಿತ್ಸೆ:- ಪ್ರತಿಯೊಂದು ಕೈಗಾರಿಕಾ ಆವರಣದಲ್ಲಿ ನಿಯಮಿಸಬಹುದಾದಂಥ ಪ್ರಥಮ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.

16. ಕ್ಯಾಂಟೀನುಗಳು:- ರಾಜ್ಯ ಸರ್ಕಾರವು, ಸಾಮಾನ್ಯವಾಗಿ ಎರಡು ನೂರಾ ಐವತ್ತಕ್ಕೆ ಕಡಿಮೆ ಇಲ್ಲದಷ್ಟು ನೌಕರರು ಕೆಲಸ ಮಾಡುತ್ತಿರುವ ಪ್ರತಿಯೊಂದು ಕೈಗಾರಿಕಾ ಆವರಣದಲ್ಲಿ ನೌಕರರ ಉಪಯೋಗಕ್ಕಾಗಿ ಕ್ಯಾಂಟೀನು ಒದಗಿಸುವಂತೆ ಮತ್ತು ನಿರ್ವಹಿಸುವಂತೆ ನಿಯಮಗಳ ಮೂಲಕ ನಿಯೋಜಕನನ್ನು ಅಗತ್ಯಪಡಿಸಬಹುದು.

17. ಕೆಲಸದ ವೇಳೆ:- ಯಾವುದೇ ಕೈಗಾರಿಕಾ ಆವರಣದಲ್ಲಿ ಯಾವುದೇ ದಿನ ಒಂಬತ್ತು ಗಂಟೆಗಳಿಗೆ ಮೀರಿ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗೆ ಮೀರಿ ಕೆಲಸ ಮಾಡಲು ಯಾವುದೇ ನೌಕರನನ್ನು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಲು ಅನುಮತಿ ನೀಡತಕ್ಕದ್ದಲ್ಲ:

ಪರಂತು, ಯಾರೇ ವಯಸ್ಕ ನೌಕರನ ಕೆಲಸದ ಅವಧಿಯು, ಅಧಿಕಕಾಲಿಕ ಕೆಲಸವೂ ಸೇರಿದಂತೆ ಯಾವುದೇ ದಿನದಂದು ಹತ್ತು ಗಂಟೆಗಳು ಮತ್ತು ಯಾವುದೇ ವಾರದಲ್ಲಿ ಒಟ್ಟು ಐವತ್ತನಾಲ್ಕು ಗಂಟೆಗಳನ್ನು ಮೀರದಿದ್ದರೆ, ಅಧಿಕಕಾಲಿಕ ಮಜೂರಿಯ ಸಂದಾಯಕ್ಕೆ ಒಳಪಟ್ಟು, ಈ ಪ್ರಕರಣದ ಮೇರೆಗಿನ ಮಿತಿಯನ್ನು ಮೀರಿದ ಯಾವುದೇ ಅವಧಿಗೆ ಅಂಥ ಕೈಗಾರಿಕಾ ಆವರಣದಲ್ಲಿ ಕೆಲಸ ಮಾಡಲು ಅವನಿಗೆ ಅನುಮತಿ ನೀಡಬಹುದು.

18. ಅಧಿಕಕಾಲದ ಕೆಲಸಕ್ಕಾಗಿ ಮಜೂರಿಗಳು:- (1) ಯಾವುದೇ ಕೈಗಾರಿಕಾ ಆವರಣದಲ್ಲಿ ನಿಯೋಜಿತನಾದ ಯಾರೇ ನೌಕರನನ್ನು ಅಧಿಕ ಕಾಲ ಕೆಲಸ ಮಾಡಲು ಅಗತ್ಯಪಡಿಸಿದ್ದಲ್ಲಿ, ಅವನು ಅಂಥ ಅಧಿಕ ಕಾಲದ ಕೆಲಸದ ಸಂಬಂಧದಲ್ಲಿ ಅವನ ಮಜೂರಿಯ ಸಾಮಾನ್ಯ ದರದ ಎರಡರಷ್ಟು ದರದ ಮಜೂರಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ಒಂದು ಕೈಗಾರಿಕಾ ಪ್ರಾಂಗಣದಲ್ಲಿನ ನೌಕರರಿಗೆ ತುಂಡು ಕೆಲಸದ ದರದ ಆಧಾರದ ಮೇಲೆ ಮಜೂರಿ ಸಂದಾಯ ಆಗುತ್ತಿರುವಲ್ಲಿ, ಅಧಿಕ ಕಾಲದ ದರವನ್ನು, ಈ ಪ್ರಕರಣದ ಉದ್ದೇಶಗಳಿಗಾಗಿ, ಅಧಿಕ ಕಾಲದ ಕೆಲಸವನ್ನು ಮಾಡಲಾದ ವಾರದ ನಿಕಟ ಪೂರ್ವದ ವಾರದಲ್ಲಿ ಅವರು ವಾಸ್ತವಿಕವಾಗಿ ಕೆಲಸ ಮಾಡಿದ ದಿನಗಳಿಗೆ ಅವರ ಪೂರ್ಣಕಾಲಿಕ ಗಳಿಕೆಯ ದಿನದ ಸರಾಸರಿಗೆ ಸಮಾನವಾದುದಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಇರುವಂಥ ಕಾಲದ ದರಗಳಲ್ಲಿ ಲೆಕ್ಕ ಹಾಕತಕ್ಕದ್ದು.

ವಿವರಣೆ:- ಒಬ್ಬ ನೌಕರನು, ಅಧಿಕ ಕಾಲ ಕೆಲಸ ನಡೆದ ನಿಕಟಪೂರ್ವದ ವಾರದ ಯಾವುದೇ ದಿನದಂದು ಕೆಲಸ ಮಾಡದಿರುವಲ್ಲಿ, ಅವನು ವಾಸ್ತವವಾಗಿ ಕೆಲಸ ಮಾಡಿದ ಅಂಥ ವಾರದ ನಿಕಟ ಪೂರ್ವದ ಯಾವುದೇ ವಾರವನ್ನು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಅಧಿಕ ಕಾಲ ಕೆಲಸ ಮಾಡಿದ ದರವನ್ನು ಲೆಕ್ಕಹಾಕುವುದಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ "ಸಾಮಾನ್ಯ ಮಜೂರಿ ದರಗಳು " ಎಂದರೆ, ಮೂಲ ಮಜೂರಿಗಳು ಮತ್ತು ನೌಕರರು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವಂತೆ ಆಹಾರಧಾನ್ಯಗಳ ಮತ್ತು ಇತರ ವಸ್ತುಗಳನ್ನು ರಿಯಾಯಿತಿ ದರದ ಮಾರಾಟದ ಮೂಲಕ ಅವನಿಗೆ ಒದಗಿಸುವುದರಿಂದ ಕೂಡಿಬರುವ ಅನುಕೂಲಕ್ಕೆ ಸಮನಾದ ನಗದು ಸೇರಿದಂಥ ಭತ್ಯೆ, ಆದರೆ ಅದರಲ್ಲಿ ಬೋನಸ್ ಸೇರುವುದಿಲ್ಲ.

(4) ಆಹಾರಧಾನ್ಯಗಳು ಮತ್ತು ಇತರ ವಸ್ತುಗಳನ್ನು ನೌಕರನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿಸುವುದರಿಂದ ಕೂಡಿಬರುವ ಅನುಕೂಲಕ್ಕೆ ಸಮಾನವಾದ ನಗದನ್ನು, ಒಂದು ನಿಗದಿತ ಕುಟುಂಬಕ್ಕೆ ಗ್ರಾಹ್ಯವಾದ ಆಹಾರ ಧಾನ್ಯಗಳ ಮತ್ತು ಇತರ ವಸ್ತುಗಳ ಗರಿಷ್ಠ ಪರಿಮಾಣದ ಆಧಾರದ ಮೇಲೆ ನಿಯಮಿಸಬಹುದಾದಷ್ಟು ಸಲ ಲೆಕ್ಕ ಹಾಕತಕ್ಕದ್ದು.

ವಿವರಣೆ I- "ನಿಗದಿತ ಕುಟುಂಬ " ಎಂದರೆ, ಒಟ್ಟು ಮೂರು ವಯಸ್ಕ ಬಳಕೆ ಘಟಕಗಳಲ್ಲಿ ಅಗತ್ಯವಾಗುವಂತೆ ನೌಕರ, ಅವನ ಅಥವಾ ಅವಳ ಹೆಂಡತಿ/ಗಂಡ ಮತ್ತು ಇಬ್ಬರು ಮಕ್ಕಳನ್ನು ಒಳಗೊಂಡ ಒಂದು ಕುಟುಂಬ.

ವಿವರಣೆ II:- "ವಯಸ್ಕ ಬಳಕೆ ಘಟಕಗಳು" ಎಂದರೆ, ಹದಿನಾಲ್ಕು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಪುರುಷರ ಬಳಕೆಯ ಘಟಕಗಳು ಮತ್ತು ಹದಿನಾಲ್ಕು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಹಿಳೆಯ ಬಳಕೆಯ ಘಟಕಗಳು ಮತ್ತು ಮಕ್ಕಳ ಬಳಕೆ ಘಟಕವನ್ನು, ಒಂದು ವಯಸ್ಕ ಬಳಕೆ ಘಟಕದ ಅನುಕ್ರಮವಾಗಿ ಹತ್ತನೇ ಎಂಟು ಮತ್ತು ಹತ್ತನೇ ಆರರ ದರದಲ್ಲಿ ಲೆಕ್ಕ ಹಾಕತಕ್ಕದ್ದು.

19. ವಿಶ್ರಾಂತಿಗಾಗಿ ಮಧ್ಯಂತರ:- ಪ್ರತಿದಿನ ಒಂದು ಕೈಗಾರಿಕಾ ಆವರಣದಲ್ಲಿ ನೌಕರರ ಕೆಲಸದ ಅವಧಿಗಳನ್ನು, ಯಾವುದೇ ಅವಧಿಯು ಐದು ಗಂಟೆಗಳಿಗೆ ಮೀರದಂತೆ ಮತ್ತು ಯಾರೇ ನೌಕರನು ಕನಿಷ್ಠಪಕ್ಷ ಅರ್ಧ ಗಂಟೆಯ ವಿರಾಮದ ಮಧ್ಯಂತರವನ್ನು ಪಡೆಯುವ ಮುನ್ನ ಐದು ಗಂಟೆಗಳಿಗೆ ಮೀರಿ ಕೆಲಸ ಮಾಡದಂತೆ ನಿಗದಿಪಡಿಸತಕ್ಕದ್ದು.

20. ವ್ಯಾಪ್ತಿ:- ಒಂದು ಕೈಗಾರಿಕಾ ಆವರಣದಲ್ಲಿನ ನೌಕರನ ಕೆಲಸದ ಅವಧಿಗಳು, 19ನೇ ಪ್ರಕರಣದ ಮೇರೆಗಿನ ಅವನ ವಿರಾಮದ ಮಧ್ಯಂತರಗಳೂ ಸೇರಿ ಯಾವುದೇ ದಿನ ಹತ್ತೂವರೆ ಗಂಟೆಗಳಿಗೆ ಮೀರಿ ವ್ಯಾಪ್ತವಾಗದ ಹಾಗೆ ಅವುಗಳನ್ನು ವ್ಯವಸ್ಥೆಗೊಳಿಸತಕ್ಕದ್ದು:

ಪರಂತು, ಚೀಫ್ ಇನ್ಸ್‌ಪೆಕ್ಟರ್ ಲಿಖಿತದಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ ಕೆಲಸದ ವ್ಯಾಪ್ತಿಯನ್ನು ಹನ್ನೆರಡು ಗಂಟೆಗಳಿಗೆ ಹೆಚ್ಚಿಸಬಹುದು.

21. ವಾರದ ರಜಾ ದಿನಗಳು:- (1) ಪ್ರತಿಯೊಂದು ಕೈಗಾರಿಕಾ ಆವರಣವು ಬೀಡಿ ಅಥವಾ ಹೊಗೆಸೊಪ್ಪಿನ ಎಲೆಗಳನ್ನು ನೆನೆಸುವ ದಿನವನ್ನು ಹೊರತುಪಡಿಸಿ ವಾರದಲ್ಲಿ ಒಂದು ದಿನ ಸಂಪೂರ್ಣವಾಗಿ ಮುಚ್ಚಿರತಕ್ಕದ್ದು. ಆ ದಿನವನ್ನು ಕೈಗಾರಿಕಾ ಆವರಣದ ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸಲಾದ ನೋಟೀಸಿನಲ್ಲಿ ನಿಯೋಜಕನು ನಿರ್ದಿಷ್ಟಪಡಿಸತಕ್ಕದ್ದು. ಹಾಗೆ ನಿರ್ದಿಷ್ಟಪಡಿಸಲಾದ ದಿನವನ್ನು ನಿಯೋಜಕನು, ಮೂರು ತಿಂಗಳಲ್ಲಿ ಒಂದಕ್ಕಿಂತ ಹೆಚ್ಚು ಸಲ ಮತ್ತು ಚೀಫ್ ಇನ್ಸ್‌ಪೆಕ್ಟರನ ಮುಂಚಿನ ಲಿಖಿತ ಅನುಮತಿಯಿಲ್ಲದೆ ವ್ಯತ್ಯಾಸ ಮಾಡತಕ್ಕದ್ದಲ್ಲ:

ಪರಂತು, ಅಂಥ ಪ್ರತಿಯೊಂದು ನೋಟೀಸಿನ ಪ್ರತಿಯನ್ನು ಅಂಥ ನೋಟೀಸನ್ನು ಕೈಗಾರಿಕಾ ಆವರಣಗಳಲ್ಲಿ ಪ್ರದರ್ಶಿಸಿದ ದಿನಾಂಕದಿಂದ ಎರಡು ವಾರಗಳ ಒಳಗಾಗಿ ಕೈಗಾರಿಕಾ ಆವರಣಗಳ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಇನ್ಸ್‌ಪೆಕ್ಟರಿಗೆ ಕಳುಹಿಸಿ ಕೊಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದ ಅನುಸಾರ ಕೈಗಾರಿಕಾ ಆವರಣವು ಮುಚ್ಚಿರುವ ದಿನದಂದು ಬೀಡಿ ಅಥವಾ ಹೊಗೆಸೊಪ್ಪಿನ ಎಲೆಗಳನ್ನು ನೆನೆಸುವುದಕ್ಕಾಗಿ ಸದರಿ ಆವರಣದಲ್ಲಿ ನಿಯೋಜಿತನಾದ ಒಬ್ಬ ನೌಕರನು ಸದರಿ ದಿವಸದ ನಿಕಟಪೂರ್ವದ ಅಥವಾ ತರುವಾಯದ ಮೂರು ದಿನಗಳ ಪೈಕಿ ಒಂದು ದಿನ ಬದಲಿ ರಜೆಯನ್ನು ಪಡೆಯಲು ಅವನಿಗೆ ಅನುಮತಿಸತಕ್ಕದ್ದು.

(3) ತದ್ವಿರುದ್ಧವಾದ ಯಾವುದೇ ಕರಾರು ಇದ್ದರೂ, ಯಾವುದೇ ಅಧಿಕಕಾಲದ ಗಳಿಕೆಗಳನ್ನು ಮತ್ತು ಬೋನಸನ್ನು ಹೊರತುಪಡಿಸಿ, ಆದರೆ ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳೂ ಸೇರಿದಂತೆ, ಈ ಪ್ರಕರಣದ ಮೇರೆಗಿನ ಒಂದು ದಿನದ ರಜೆಗಾಗಿ, ಒಬ್ಬ ನೌಕರನು ರಜಾ ದಿನದ ನಿಕಟಪೂರ್ವದ ವಾರದ ಅವಧಿಯಲ್ಲಿ ಕೆಲಸ ಮಾಡಿದ ದಿನಗಳ ಅವನ ಒಟ್ಟು ಪೂರ್ಣಕಾಲಿಕ ಗಳಿಕೆಗಳ ದಿನದ ಸರಾಸರಿಗೆ ಸಮಾನವಾದ ದರದಲ್ಲಿ ಅವನಿಗೆ ಮಜೂರಿ ಸಂದಾಯ ಮಾಡತಕ್ಕದ್ದು.

ವಿವರಣೆ:- "ಒಟ್ಟು ಪೂರ್ಣಕಾಲಿಕ ಗಳಿಕೆಗಳು" ಎಂಬ ಪದಾವಳಿಯು, ಅದಕ್ಕೆ 27ನೇ ಪ್ರಕರಣದಲ್ಲಿ ಕೊಟ್ಟ ಅರ್ಥವನ್ನು ಹೊಂದಿರತಕ್ಕದ್ದು.

22. ಕೆಲಸದ ಅವಧಿಗಳ ನೋಟೀಸು:- (1) ಪ್ರತಿಯೊಂದು ಕೈಗಾರಿಕಾ ಆವರಣದಲ್ಲಿ ಪ್ರತಿದಿನ ನೌಕರರು ಕೆಲಸ ಮಾಡಬೇಕಾದಂಥ ಅವಧಿಗಳನ್ನು ಸ್ಪಷ್ಟವಾಗಿ ತೋರಿಸುವಂಥ ಕೆಲಸದ ಅವಧಿಗಳ ನೋಟೀಸನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಸರಿಯಾಗಿ ನಿರ್ವಹಿಸತಕ್ಕದ್ದು.

(2) (ಎ) (1)ನೆಯ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನ ಒಂದು ಪ್ರತಿಯನ್ನು, ಈ ಅಧಿನಿಯಮದ ಪ್ರಾರಂಭದಲ್ಲಿ ಕೆಲಸವನ್ನು ನಡೆಸುತ್ತಿರುವ ಯಾವುದೇ ಕೈಗಾರಿಕಾ ಆವರಣದ ಸಂಬಂಧದಲ್ಲಿ, ಈ ಅಧಿನಿಯಮದ ಮೇರೆಗೆ ಪ್ರಥಮ ಬಾರಿಗೆ ಲೈಸೆನ್ಸು ನೀಡಿದ ದಿನಾಂಕದಿಂದ ಎರಡು ವಾರಗಳೊಳಗೆ ಮತ್ತು ಅಂಥ ಪ್ರಾರಂಭದ ತರುವಾಯ ಕೆಲಸವನ್ನು ಪ್ರಾರಂಭಿಸುವ ಯಾವುದೇ ಕೈಗಾರಿಕಾ ಆವರಣದ ಸಂಬಂಧದಲ್ಲಿ ಕೆಲಸವು ಕೈಗಾರಿಕಾ ಆವರಣದಲ್ಲಿ ಪ್ರಾರಂಭವಾದ ದಿನಾಂಕಕ್ಕೆ ಮುಂಚೆ ಆ ಕೈಗಾರಿಕಾ ಆವರಣದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಇನ್ಸ್‌ಪೆಕ್ಟರನಿಗೆ ಮೂರು ಪ್ರತಿಯಲ್ಲಿ ಕಳುಹಿಸತಕ್ಕದ್ದು.

(ಬಿ) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸಿನಲ್ಲಿ ಬದಲಾವಣೆಯನ್ನು ಅಗತ್ಯಪಡಿಸಬಹುದಾದ ಕೆಲಸದ ಪದ್ಧತಿಯಲ್ಲಿ ಮಾಡಲು ಉದ್ದೇಶಿಸಿರುವ ಯಾವುದೇ ಬದಲಾವಣೆಯ ಬಗ್ಗೆ, ಆ ಬದಲಾವಣೆ ಮಾಡುವುದಕ್ಕೆ ಮುಂಚೆ ಮೂರು ಪ್ರತಿಯಲ್ಲಿ ಇನ್ಸ್‌ಪೆಕ್ಟರನಿಗೆ ತಿಳಿಸತಕ್ಕದ್ದು ಮತ್ತು ಪರಿಶೀಲಕನ ಪೂರ್ವ ಮಂಜೂರಾತಿ ಪಡೆದ ಹೊರತು, ಕೊನೆಯ ಬದಲಾವಣೆಯ ತರುವಾಯ ಒಂದು ವಾರವು ಗತಿಸುವುದಕ್ಕೆ ಮುಂಚೆ ಅಂಥ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ.

23. ಕೆಲಸದ ಗಂಟೆಗಳು 22ನೇ ಪ್ರಕರಣದ ಮೇರೆಗಿನ ನೋಟೀಸಿಗೆ ಸಂವಾದಿಯಾಗಿರುವುದು:- 22ನೇ ಪ್ರಕರಣದ ಮೇರೆಗೆ ಆ ಆವರಣದಲ್ಲಿ ಪ್ರದರ್ಶಿಸಲಾದ ಕೆಲಸದ ನೋಟೀಸಿಗೆ ಅನುಸಾರವಾಗಿ ಹೊರತು ಯಾವುದೇ ಕೈಗಾರಿಕಾ ಆವರಣದಲ್ಲಿ ಯಾರೇ ನೌಕರನನ್ನು ನಿಯೋಜಿಸತಕ್ಕದ್ದಲ್ಲ.

24. ಮಕ್ಕಳ ನಿಯೋಜನೆಯ ನಿಷೇಧ:- ಯಾವುದೇ ಕೈಗಾರಿಕಾ ಆವರಣದಲ್ಲಿ ಕೆಲಸ ಮಾಡಲು ಯಾವುದೇ ಮಗುವನ್ನು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅನುಮತಿಸತಕ್ಕದ್ದಲ್ಲ.

25. ಕೆಲವು ಗಂಟೆಗಳ ಅವಧಿಯಲ್ಲಿ ಮಹಿಳೆಯರ ಅಥವಾ ಯುವಕರ ನಿಯೋಜನೆಗೆ ನಿಷೇಧ:- ಯಾರೇ ಮಹಿಳೆಯನ್ನು ಅಥವಾ ಯುವಕನನ್ನು ಬೆಳಿಗ್ಗೆ 6 ಮತ್ತು ಸಂಜೆ 7ರ ನಡುವೆ ಹೊರತು, ಯಾವುದೇ ಕೈಗಾರಿಕಾ ಆವರಣದಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅನುಮತಿಸತಕ್ಕದ್ದಲ್ಲ.

26. ಮಜೂರಿ ಸಹಿತ ವಾರ್ಷಿಕ ರಜೆ:- (1) ಒಂದು ಕಾರ್ಯ ಸಂಸ್ಥೆಯಲ್ಲಿನ ಪ್ರತಿಯೊಬ್ಬ ಕೆಲಸಗಾರನಿಗೆ ಒಂದು ಕ್ಯಾಲೆಂಡರ್ ವರ್ಷದಲ್ಲಿ,-

(i) ಒಬ್ಬ ವಯಸ್ಕನ ಸಂಬಂಧದಲ್ಲಿ, ಅವನು ಹಿಂದಿನ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ನಿರ್ವಹಿಸಿದ ಪ್ರತಿ ಇಪ್ಪತ್ತು ದಿನಗಳ ಕೆಲಸಕ್ಕಾಗಿ ಒಂದು ದಿನದ ದರದಲ್ಲಿ;

(ii) ಒಬ್ಬ ಯುವಕನ ಸಂಬಂಧದಲ್ಲಿ, ಅವನು ಹಿಂದಿನ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ನಿರ್ವಹಿಸಿದ ಪ್ರತಿ ಹದಿನೈದು ದಿನಗಳ ಕೆಲಸಕ್ಕಾಗಿ ಒಂದು ದಿನದ ದರದಲ್ಲಿ -

-ಮಜೂರಿ ಸಹಿತ ರಜೆಯನ್ನು ಅನುಮತಿಸತಕ್ಕದ್ದು.

ವಿವರಣೆ:- ಈ ಉಪ-ಪ್ರಕರಣದ ಮೇರೆಗೆ ಅನುಮತಿಸತಕ್ಕ ರಜೆಯು, ರಜೆಯ ಅವಧಿಯಲ್ಲಾಗಲಿ ಅಥವಾ ಪ್ರಾರಂಭದಲ್ಲಿಯಾಗಲೀ ಅಥವಾ ಕೊನೆಯಲ್ಲಿಯಾಗಲೀ ಬರುವ ಎಲ್ಲಾ ರಜೆಗಳನ್ನು ಹೊರತುಪಡಿಸಿ ಇರತಕ್ಕದ್ದು.

(2) ವರ್ಷದ ಅವಧಿಯಲ್ಲಿ ಒಬ್ಬ ನೌಕರನನ್ನು ಸೇವೆಯಿಂದ ಬಿಡುಗಡೆ ಮಾಡಿದರೆ ಅಥವಾ ವಜಾ ಮಾಡಿದರೆ ಅಥವಾ ಅವನು ಕೆಲಸವನ್ನು ಬಿಟ್ಟು ಹೋದರೆ, ಅವನು (1)ನೇ ಉಪ-ಪ್ರಕರಣದಲ್ಲಿ ಹೇಳಲಾದ ದರದಂತೆ ಮಜೂರಿಗಳ ಸಹಿತ ರಜೆಗೆ ಹಕ್ಕುಳ್ಳವನಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ರಜೆಯನ್ನು ಲೆಕ್ಕ ಹಾಕುವಾಗ, ಅರ್ಧ ದಿನ ಅಥವಾ ಹೆಚ್ಚಿನ ರಜೆಯ ಯಾವುದೇ ಭಾಗವನ್ನು ಒಂದು ಪೂರ್ಣ ದಿನದ ರಜೆ ಎಂದು ಪರಿಗಣಿಸತಕ್ಕದ್ದು ಮತ್ತು ಅರ್ಧ ದಿವಸಕ್ಕಿಂತ ಕಡಿಮೆಯಿರುವ ಯಾವುದೇ ಅಂಶವನ್ನು ಬಿಟ್ಟುಬಿಡತಕ್ಕದ್ದು.

(4) ಯಾರೇ ನೌಕರನು ಯಾವುದೇ ಕ್ಯಾಲೆಂಡರ್ ವರ್ಷದಲ್ಲಿ (1)ನೇ ಉಪ-ಪ್ರಕರಣದ ಮೇರೆಗೆ ಅವನಿಗೆ ಅನುಮತಿಸಲಾದ ಇಡೀ ರಜೆಯನ್ನು ತೆಗೆದುಕೊಳ್ಳದಿದ್ದರೆ, ಅವನು ತೆಗೆದುಕೊಳ್ಳದಿರುವ ರಜೆಯನ್ನು, ತರುವಾಯದ ಕ್ಯಾಲೆಂಡರ್ ವರ್ಷದಲ್ಲಿ ಅವನಿಗೆ ಅನುಮತಿಸಲಾದ ರಜೆಗೆ ಅದನ್ನು ಸೇರಿಸತಕ್ಕದ್ದು:

ಪರಂತು, ತರುವಾಯದ ವರ್ಷಕ್ಕೆ ಮುಂದಕ್ಕೆ ಒಯ್ಯಬಹುದಾದ ಒಟ್ಟು ರಜಾ ದಿನಗಳ ಸಂಖ್ಯೆಯು, ವಯಸ್ಕನ ಸಂದರ್ಭದಲ್ಲಿ ಮೂವತ್ತು ಅಥವಾ ಯುವಕನ ಸಂದರ್ಭದಲ್ಲಿ ನಲವತ್ತು ದಿನಗಳನ್ನು ಮೀರತಕ್ಕದ್ದಲ್ಲ.

(5) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಸಲಾಗುವ ಇಡೀ ರಜೆಗಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ನೌಕರನು ಸಲ್ಲಿಸತಕ್ಕ ಅರ್ಜಿಯು ಲಿಖಿತದಲ್ಲಿರತಕ್ಕದ್ದು, ಮತ್ತು ಅದನ್ನು ಸಾಮಾನ್ಯವಾಗಿ ರಜೆಯು ಪ್ರಾರಂಭವಾಗಬೇಕೆಂದು ಅವನು ಇಚ್ಛಿಸುವ ದಿನಕ್ಕೆ ಸಾಕಷ್ಟು ಮುಂಚಿತವಾಗಿ ಸಲ್ಲಿಸತಕ್ಕದ್ದು.

(6) (1)ನೇ ಉಪ-ಪ್ರಕರಣದ ಮೇರೆಗೆ ರಜೆಗೆ ಹಕ್ಕುಳ್ಳವನಾಗಿರುವ ನೌಕರನ ನಿಯೋಜನೆಯನ್ನು, ಅವನು ಹಕ್ಕುಳ್ಳವನಾಗಿರುವಂಥ ಇಡೀ ರಜೆಯನ್ನು ಬಳಸಿಕೊಳ್ಳುವುದಕ್ಕೆ ಮುಂಚೆ ನಿಯೋಜಕನು ಕೊನೆಗಾಣಿಸಿದರೆ, ಅಥವಾ ನೌಕರನು ರಜೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಅವನಿಗೆ ಅಂಥ ರಜೆಯನ್ನು ಮಂಜೂರು ಮಾಡಿಲ್ಲದಿದ್ದರೆ, ಅಥವಾ ಅವನು ರಜೆಯನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ತನ್ನ ನಿಯೋಜನೆಯನ್ನು ಬಿಟ್ಟಿದ್ದರೆ, ಅವನು ತೆಗೆದುಕೊಳ್ಳದಿದ್ದ ರಜೆಯ ಸಂಬಂಧದಲ್ಲಿ ನಿಯೋಜಕನು 27ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಅವನಿಗೆ ಸಂದಾಯ ಮಾಡತಕ್ಕದ್ದು ಮತ್ತು ನಿಯೋಜಕನು, ನೌಕರನ ನಿಯೋಜನೆಯನ್ನು ಕೊನೆಗೊಳಿಸಿದ್ದಲ್ಲಿ, ಅಂಥ ಕೊನೆಗೊಳಿಸುವಿಕೆಯ ತರುವಾಯ ಎರಡನೆಯ ಕೆಲಸದ ದಿನವು ಮುಗಿಯುವುದಕ್ಕೆ ಮುಂಚೆ ಮತ್ತು ನೌಕರನು ತನ್ನ ನಿಯೋಜನೆಯನ್ನು ಬಿಟ್ಟಿದ್ದಲ್ಲಿ ಆ ತರುವಾಯದ ವೇತನದ ದಿನದಂದು ಅಥವಾ ಅದಕ್ಕೆ ಮುಂಚೆ ಅಂಥ ಸಂದಾಯವನ್ನು ಮಾಡತಕ್ಕದ್ದು.

(7) ಸೇವೆಯಿಂದ ಬಿಡುಗಡೆ ಮಾಡುವುದಕ್ಕೆ ಅಥವಾ ವಜಾ ಮಾಡುವುದಕ್ಕೆ ಮುಂಚೆ ಕೊಡಬೇಕಾದಂಥ ಯಾವುದೇ ನೋಟೀಸಿನ ಅವಧಿಯನ್ನು ಲೆಕ್ಕ ಹಾಕುವಲ್ಲಿ ನೌಕರನು ಬಳಸಿಕೊಳ್ಳದ ರಜೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

27. ರಜಾ ಅವಧಿಯಲ್ಲಿ ಮಜೂರಿಗಳು:- (1) ಒಬ್ಬ ನೌಕರನಿಗೆ 26ನೇ ಪ್ರಕರಣದ ಮೇರೆಗೆ ಅನುಮತಿಸಲಾದ ರಜೆಗಾಗಿ ಯಾವುದೇ ಅಧಿಕ ಕಾಲದ ಗಳಿಕೆಗಳನ್ನು ಮತ್ತು ಬೋನಸನ್ನು ಹೊರತುಪಡಿಸಿ, ಆದರೆ ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳೂ ಸೇರಿದಂತೆ ಅವನ ರಜಾ ದಿನದ ನಿಕಟಪೂರ್ವದ ತಿಂಗಳಿನಲ್ಲಿ ಅವನು ಕೆಲಸ ಮಾಡಿದ ದಿನಗಳಿಗಾಗಿ ಅವನ ಒಟ್ಟು ಪೂರ್ಣಕಾಲಿಕ ಗಳಿಕೆಗಳ ದೈನಿಕ ಸರಾಸರಿಗೆ ಸಮಾನವಾದ ದರದಲ್ಲಿ ಮಜೂರಿ ಸಂದಾಯವಾಗತಕ್ಕದ್ದು.

ವಿವರಣೆ I :- ಈ ಉಪ-ಪ್ರಕರಣದಲ್ಲಿ "ಒಟ್ಟು ಪೂರ್ಣಕಾಲಿಕ ಗಳಿಕೆಗಳು " ಎಂಬ ಪದಾವಳಿಯು ನೌಕರನು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವಂತೆ, ಆಹಾರಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಅವನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿಸುವುದರಿಂದ ಅವನಿಗೆ ಕೂಡಿಬರುವ ಅನುಕೂಲಕ್ಕೆ ಸಮಾನವಾದ ಮೊಬಲಗನ್ನು ಒಳಗೊಳ್ಳುತ್ತದೆ. ಆದರೆ ಅದರಲ್ಲಿ ಬೋನಸ್ ಒಳಗೊಳ್ಳುವುದಿಲ್ಲ.

ವಿವರಣೆ II :- ರಜಾವಧಿಯಲ್ಲಿ ಒಬ್ಬ ಮನೆ ಕೆಲಸಗಾರನಿಗೆ ಸಂದಾಯವಾಗತಕ್ಕ ಮಜೂರಿಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಥವಾ ಮನೆ ಕೆಲಸಗಾರಳಿಗೆ ಹೆರಿಗೆ ಸೌಲಭ್ಯದ ಸಂದಾಯದ ಉದ್ದೇಶಕ್ಕಾಗಿ "ದಿವಸ " ಎಂದರೆ, ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ತಯಾರಿಸುವುದಕ್ಕಾಗಿ ಮಧ್ಯರಾತ್ರಿಯಿಂದ ಪ್ರಾರಂಭವಾಗುವ ಇಪ್ಪತ್ತನಾಲ್ಕು ಗಂಟೆಗಳ ಅವಧಿಯಲ್ಲಿ ಅಂಥ ಮನೆಕೆಲಸಗಾರನು ನಿಯೋಜಿತನಾದ ಯಾವುದೇ ಅವಧಿ.

(2) ಒಬ್ಬ ವಯಸ್ಕನ ಸಂದರ್ಭದಲ್ಲಿ ನಾಲ್ಕು ದಿನಗಳು ಮತ್ತು ಒಬ್ಬ ಯುವಕನ ಸಂದರ್ಭದಲ್ಲಿ ಐದು ದಿನಗಳಿಗಿಂತ ಕಡಿಮೆಯಿಲ್ಲದ ರಜೆಯನ್ನು ಅನುಮತಿಸಲಾದ ಒಬ್ಬ ನೌಕರನಿಗೆ ಅವನ ರಜೆ ಪ್ರಾರಂಭವಾಗುವುದಕ್ಕೆ ಮುಂಚೆ ಅನುಮತಿಸಲಾದ ರಜೆಯ ಅವಧಿಗೆ ಸಲ್ಲತಕ್ಕ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

28. ಕೈಗಾರಿಕಾ ಆವರಣಗಳಿಗೆ ಮಜೂರಿ ಸಂದಾಯ ಅಧಿನಿಯಮ, 1936ರ ಅನ್ವಯ:- (1) ಇನ್ನು ಮುಂದೆ ಈ ಪ್ರಕರಣದಲ್ಲಿ ಸದರಿ ಅಧಿನಿಯಮವೆಂದು ಉಲ್ಲೇಖಿತವಾಗುವ ಮಜೂರಿ ಸಂದಾಯ ಅಧಿನಿಯಮ, 1936 (1936ರ 4) ಇದರಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸದರಿ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಎಲ್ಲಾ ಅಥವಾ ಯಾವುವೇ ಉಪಬಂಧಗಳು ಕಾರ್ಯ ಸಂಸ್ಥೆಯಲ್ಲಿನ ಎಲ್ಲಾ ನೌಕರರಿಗೆ ಅಥವಾ ನೌಕರರ ಯಾವುದೇ ವರ್ಗಕ್ಕೆ ಅಥವಾ ಈ ಅಧಿನಿಯಮವು ಅನ್ವಯವಾಗುವಂಥ ಕಾರ್ಯ ಸಂಸ್ಥೆಯಲ್ಲಿನ ವರ್ಗಕ್ಕೆ ಅನ್ವಯವಾಗತಕ್ಕದ್ದೆಂದು ಮತ್ತು ಸದರಿ ಅಧಿನಿಯಮದ ಉಪಬಂಧಗಳ ಅಂಥ ಅನ್ವಯದ ತರುವಾಯ, ಈ ಅಧಿನಿಯಮದ ಮೇರೆಗೆ ನೇಮಕ ಮಾಡಿದ ಒಬ್ಬ ಇನ್ಸ್‌ಪೆಕ್ಟರ್‌ನನ್ನು ಅವನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಸದರಿ ಅಧಿನಿಯಮದ ಅಂಥ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಇನ್ಸ್‌ಪೆಕ್ಟರನಾಗಿರುವನು ಎಂಬುದಾಗಿ ಭಾವಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ರಾಜ್ಯ ಸರ್ಕಾರವು, (1)ನೆಯ ಉಪ-ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯನ್ನು ಅಂಥದೇ ಅಧಿಸೂಚನೆಯ ಮೂಲಕ ರದ್ದುಗೊಳಿಸಬಹುದು ಅಥವಾ ವ್ಯತ್ಯಾಸ ಮಾಡಬಹುದು.

29. ವಿಶೇಷ ಉಪಬಂಧಗಳು:- (1) ರಾಜ್ಯ ಸರ್ಕಾರವು, ಕೈಗಾರಿಕಾ ಆವರಣದ ಹೊರಗೆ ನೌಕರರು ಬೀಡಿ ಅಥವಾ ಹೊಗೆಸೊಪ್ಪಿನ ಎಲೆಗಳನ್ನು ನೆನೆಸುವುದಕ್ಕೆ ಅಥವಾ ಕತ್ತರಿಸುವುದಕ್ಕೆ, ಅಂಥ ನೌಕರರ ಪರವಾಗಿ, ನಿಯೋಜಕರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ ಮೇಲೆ ಅನುಮತಿ ನೀಡಬಹುದು.

(2) ನಿಯೋಜಕನು, (1)ನೇ ಉಪ-ಪ್ರಕರಣದ ಮೇರೆಗೆ ಕೈಗಾರಿಕಾ ಆವರಣದ ಹೊರಗೆ ನಡೆಸಲು ಅನುಮತಿ ನೀಡಲಾದ ಕೆಲಸದ ಬಗೆಗೆ ಒಂದು ದಾಖಲೆಯನ್ನು ನಿಯಮಿತ ನಮೂನೆಯಲ್ಲಿ ಇಡತಕ್ಕದ್ದು.

(3) ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ನಿಯೋಜಕನು, ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ತಯಾರಿಸುವುದಕ್ಕೆ ಸಂಬಂಧಿಸಿದಂತೆ, ಕೈಗಾರಿಕಾ ಆವರಣದ ಹೊರಗೆ ಯಾವುದೇ ತಯಾರಿಕಾ ಪ್ರಕ್ರಿಯೆಯನ್ನು ನಡೆಸುವಂತೆ ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿಸತಕ್ಕದ್ದಲ್ಲ:

ಪರಂತು, ಮನೆಯಲ್ಲಿ ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ತಯಾರಿಸುವುದಕ್ಕಾಗಿ ನಿಯೋಜಕನು ಅಥವಾ ಕರಾರುದಾರನು ಕಚ್ಚಾ ಸಾಮಗ್ರಿಯನ್ನು ಕೊಟ್ಟಿರುವ ಯಾರೇ ಕಾರ್ಮಿಕನಿಗೆ ಈ ಉಪ-ಪ್ರಕರಣದಲ್ಲಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ.

30. ವಯಸ್ಸಿನ ಬಗ್ಗೆ ಹೊಣೆ:- (1) ಯಾವುದೇ ಕೃತ್ಯ ಅಥವಾ ಲೋಪವು ಒಬ್ಬ ವ್ಯಕ್ತಿಯು ನಿರ್ದಿಷ್ಟ ವಯಸ್ಸಿಗಿಂತ ಕಡಿಮೆ ವಯಸ್ಸಿನವನಾಗಿದ್ದರೆ, ಈ ಅಧಿನಿಯಮದ ಮೇರೆಗೆ ದಂಡನೀಯ ಅಪರಾಧವಾಗುತ್ತಿದ್ದರೆ ಮತ್ತು ಅಂಥ ವ್ಯಕ್ತಿಯು, ನ್ಯಾಯಾಲಯದ ಅಭಿಪ್ರಾಯದಲ್ಲಿ ಮೊದಲ ನೋಟಕ್ಕೆ ಅಂಥ ವಯಸ್ಸಿಗಿಂತ ಕಡಿಮೆ ವಯಸ್ಸಿನವನಾಗಿದ್ದರೆ, ಅಂಥ ವ್ಯಕ್ತಿಯು ಅಂಥ ವಯಸ್ಸಿಗೆ ಕಡಿಮೆ ವಯಸ್ಸಿನವನಾಗಿಲ್ಲವೆಂದು ರುಜುವಾತುಪಡಿಸುವ ಭಾರವು ಆಪಾದಿತನ ಮೇಲಿರತಕ್ಕದ್ದು.

(2) ಸಹಾಯಕ ಸಿವಿಲ್ ಶಸ್ತ್ರಚಿಕಿತ್ಸಕನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ವೈದ್ಯಕೀಯ ಅಧಿಕಾರಿಯು ತಾನು ನೌಕರನನ್ನು ಖುದ್ದಾಗಿ ಪರೀಕ್ಷಿಸಿರುವೆನೆಂದು ಮತ್ತು ಘೋಷಣೆಯಲ್ಲಿ ನಮೂದಿಸಿದಂತೆ ಆ ನೌಕರನು ಆ ವಯಸ್ಸಿಗಿಂತ ಕಡಿಮೆ ವಯಸ್ಸಿನವನಾಗಿದ್ದಾನೆಂದು ನೌಕರನಿಗೆ ಸಂಬಂಧಿಸಿ ಅವನು ನೀಡಿದ ಅಂಥ ಘೋಷಣೆಯು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉದ್ದೇಶಗಳಿಗಾಗಿ, ಆ ನೌಕರನ ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗತಕ್ಕದ್ದು.

31. ವಜಾ ನೋಟೀಸು:- (1) ನಿಯೋಜಕನು, ಆರು ತಿಂಗಳು ಅಥವಾ ಹೆಚ್ಚು ಅವಧಿಗಾಗಿ ನಿಯೋಜಿಸಲಾದ ನೌಕರನಿಗೆ, ಯುಕ್ತ ಕಾರಣಗಳಿಗಾಗಿ ಹೊರತು ಮತ್ತು ಅಂಥ ನೌಕರನಿಗೆ ಕನಿಷ್ಠ ಒಂದು ತಿಂಗಳ ನೋಟೀಸನ್ನು ಅಥವಾ ಅಂಥ ನೋಟೀಸಿನ ಬದಲಾಗಿ ಮಜೂರಿಗಳನ್ನು ಕೊಡದೆ ಅವನ ಸೇವೆಗಳನ್ನು ಮುಕ್ತಾಯಗೊಳಿಸತಕ್ಕದ್ದಲ್ಲ:

ಪರಂತು, ಅಂಥ ನೌಕರನು ಸೇವೆಗಳನ್ನು, ನಿಯೋಜಕನು ನಡೆಸಿದ ವಿಚಾರಣೆಯಲ್ಲಿ ದಾಖಲಾದ ಸಾಕಷ್ಟು ಸಾಕ್ಷ್ಯದಿಂದ ಸಮರ್ಥಿತವಾದ ದುರ್ನಡತೆಯ ಆರೋಪದ ಮೇಲೆ ಮುಕ್ತಾಯಗೊಳಿಸಿದ್ದಲ್ಲಿ ಅಂಥ ನೋಟೀಸು ಅಗತ್ಯವಾಗತಕ್ಕದ್ದಲ್ಲ.

(2) (ಎ) ಸೇವೆಯಿಂದ ಬಿಡುಗಡೆಯಾದ, ವಜಾ ಆದ ಅಥವಾ ತೆಗೆದುಹಾಕಲಾದ ನೌಕರನು, ಅವನ ಸೇವೆಗಳನ್ನು ಬಿಟ್ಟುಕೊಡುವುದಕ್ಕೆ ಯುಕ್ತ ಕಾರಣಗಳಿಲ್ಲವೆಂಬ ಕಾರಣದಿಂದಾಗಲೀ ಅಥವಾ ನಿಯೋಜಕನು ಹೇಳುವಂತೆ ಅವನು ದುರ್ನಡತೆಯ ತಪ್ಪಿತಸ್ಥನಲ್ಲವೆಂಬ ಕಾರಣದಿಂದಾಗಲೀ ಅಥವಾ ಬಿಡುಗಡೆಯ ಅಥವಾ ವಜಾದ ಅಂಥ ದಂಡನೆಯು ಉಗ್ರವಾದುದಾಗಿದೆ ಎಂಬ ಕಾರಣದಿಂದಾಗಲೀ ನಿಯಮಿಸಬಹುದಾದಂಥ ಪ್ರಾಧಿಕಾರಕ್ಕೆ ಮತ್ತು ಅಂಥ ಸಮಯದೊಳಗೆ ಅಪೀಲು ಸಲ್ಲಿಸಬಹುದು.

(ಬಿ) ಅಪೀಲು ಪ್ರಾಧಿಕಾರವು, ನಿಯೋಜಕ ಮತ್ತು ನೌಕರನಿಗೆ ನಿಯಮಿತ ರೀತಿಯಲ್ಲಿ ನೋಟೀಸನ್ನು ಕೊಟ್ಟ ತರುವಾಯ, ಅಪೀಲನ್ನು ವಜಾ ಮಾಡಬಹುದು ಅಥವಾ ಅವನನ್ನು ನಿಯೋಜನೆಯಿಂದ ಹೊರಗಿಟ್ಟ ಅವಧಿಯ ಮಜೂರಿ ಸಹಿತ ಅಥವಾ ಮಜೂರಿ ಇಲ್ಲದೆ ನೌಕರನನ್ನು ಪೂರ್ವ ಸ್ಥಾನದಲ್ಲಿರಿಸುವಂತೆ ನಿರ್ದೇಶಿಸಬಹುದು ಅಥವಾ ಪೂರ್ವ ಸ್ಥಾನದಲ್ಲಿರಿಸದೆ ಪರಿಹಾರ ಸಂದಾಯ ಮಾಡುವಂತೆ ನಿರ್ದೇಶಿಸಬಹುದು ಅಥವಾ ಪ್ರಕರಣದ ಸಂದರ್ಭದಲ್ಲಿ ಅದು ಯುಕ್ತವೆಂದು ಭಾವಿಸಬಹುದಾದ ಇತರ ಪರಿಹಾರವನ್ನು ಮಂಜೂರು ಮಾಡಬಹುದು.

(2ಎ) ಅಪೀಲು ಪ್ರಾಧಿಕಾರವು, ಈ ಮುಂದಿನ ವಿಷಯಗಳ ಸಂಬಂಧದಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತಗೊಳಿಸಿರುವಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಎಂದರೆ:-

(ಎ) ಯಾರೇ ವ್ಯಕ್ತಿಯ ಹಾಜರಾತಿಗೆ ಒತ್ತಾಯಪಡಿಸುವುದು ಮತ್ತು ಅವನನ್ನು ಪ್ರಮಾಣವಚನ ಮಾಡಿಸಿ ಪರೀಕ್ಷಿಸುವುದು; ಮತ್ತು

(ಬಿ) ದಸ್ತಾವೇಜುಗಳನ್ನು ಮತ್ತು ಮುಖ್ಯ ವಿಷಯಗಳನ್ನು ಹಾಜರುಪಡಿಸಲು ಒತ್ತಾಯಿಸುವುದು.

(3) ಅಪೀಲು ಪ್ರಾಧಿಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು ಮತ್ತು ಉಭಯ ಪಕ್ಷಕಾರರಿಗೆ ಅದು ಬಂಧನಕಾರಿಯಾಗಿರತಕ್ಕದ್ದು ಮತ್ತು ಅಪೀಲು ಪ್ರಾಧಿಕಾರದ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಅದನ್ನು ಕಾರ್ಯಗತಗೊಳಿಸತಕ್ಕದ್ದು.

32. ಇನ್ಸ್‌ಪೆಕ್ಟರನಿಗೆ ಅಡ್ಡಿಯುಂಟು ಮಾಡಿದ್ದಕ್ಕಾಗಿ ದಂಡ:- ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಚಲಾಯಿಸುವಲ್ಲಿ ಚೀಫ್ ಇನ್ಸ್‌ಪೆಕ್ಟರ್‌ನಿಗೆ ಅಥವಾ ಇನ್ಸ್‌ಪೆಕ್ಟರನಿಗೆ ಯಾರಾದರೂ ಅಡ್ಡಿಯುಂಟು ಮಾಡಿದರೆ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ಯಾವುವೇ ನಿಯಮಗಳ ಅನುಸಾರವಾಗಿ ತನ್ನ ಅಭಿರಕ್ಷೆಯಲ್ಲಿಟ್ಟಿರುವ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಚೀಫ್ ಇನ್ಸ್‌ಪೆಕ್ಟರನು ಅಥವಾ ಇನ್ಸ್‌ಪೆಕ್ಟರನು ಕೋರಿದಾಗ ಹಾಜರುಪಡಿಸಲು ತಪ್ಪಿದರೆ ಅಥವಾ ಚೀಫ್ ಇನ್ಸ್‌ಪೆಕ್ಟರನ ಅಥವಾ ಇನ್ಸ್‌ಪೆಕ್ಟರನ ಮುಂದೆ ಹಾಜರಾಗುವುದರಿಂದ ಅಥವಾ ಅವರಿಂದ ಪರೀಕ್ಷಿಸಲ್ಪಡುವುದರಿಂದ ಕೈಗಾರಿಕಾ ಆವರಣದಲ್ಲಿನ ಯಾವನೇ ನೌಕರನನ್ನು ಮುಚ್ಚಿಟ್ಟರೆ, ಅಥವಾ ತಡೆದರೆ, ಅವನು, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

33. ಅಪರಾಧಕ್ಕಾಗಿ ಸಾಮಾನ್ಯ ದಂಡ:- (1) ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದ ಅಥವಾ 31ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ಅಪೀಲು ಪ್ರಾಧಿಕಾರವು ಮಾಡಿದ ಯಾವುದೇ ಆದೇಶಕ್ಕನುಸಾರ ಮಜೂರಿಗಳನ್ನು ಅಥವಾ ಪರಿಹಾರವನ್ನು ಸಂದಾಯ ಮಾಡಲು ತಪ್ಪಿದ ಯಾರೇ ವ್ಯಕ್ತಿಯು ಪ್ರಥಮ ಅಪರಾಧಕ್ಕಾಗಿ ಇನ್ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ದ್ವಿತೀಯ ಅಥವಾ ತರುವಾಯದ ಯಾವುದೇ ಅಪರಾಧಕ್ಕಾಗಿ ಒಂದು ತಿಂಗಳಿಗಿಂತ ಕಡಿಮೆಯಿಲ್ಲದ ಅಥವಾ ಆರು ತಿಂಗಳುಗಳಿಗಿಂತ ಹೆಚ್ಚಿಲ್ಲದ ಅವಧಿಯ ಕಾರವಾಸದಿಂದ ಅಥವಾ ನೂರು ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಅಥವಾ ಐದು ನೂರು ರೂಪಾಯಿಗಳಿಗಿಂತ ಹೆಚ್ಚಿಲ್ಲದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) (ಎ) 31ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ಅಪೀಲು ಪ್ರಾಧಿಕಾರವು ಮಾಡಿದ ಆದೇಶಕ್ಕನುಸಾರ ಯಾರೇ ನೌಕರನನ್ನು ಪೂರ್ವ ಸ್ಥಾನದಲ್ಲಿರಿಸಲು ತಪ್ಪುವ ಯಾರೇ ನಿಯೋಜಕನು ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(ಬಿ) (ಎ) ಖಂಡದ ಮೇರೆಗೆ ಅಪರಾಧಿಯೆಂದು ನಿರ್ಣಯಿಸಲ್ಪಟ್ಟ ತರುವಾಯ ಯಾರೇ ನಿಯೋಜಕನು, ಅಂಥ ಅಪರಾಧ ನಿರ್ಣಯದ ದಿನಾಂಕದ ತರುವಾಯ ಆ ಖಂಡದಲ್ಲಿ ನಮೂದಿಸಲಾದ ಆದೇಶಕ್ಕನುಸಾರ ಆ ನೌಕರನನ್ನು ಪೂರ್ವ ಸ್ಥಾನದಲ್ಲಿರಿಸಲು ತಪ್ಪಿರುವುದನ್ನು ಮುಂದುವರೆಸಿದರೆ, ಅವನು ಅಂಥ ತಪ್ಪಿತದ ಪ್ರತಿಯೊಂದು ದಿನಕ್ಕೆ ಇಪ್ಪತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(ಸಿ) ಈ ಉಪ-ಪ್ರಕರಣದ ಮೇರೆಗೆ ದಂಡನೀಯ ಅಪರಾಧವನ್ನು ಅಧಿವಿಚಾರಣೆ ಮಾಡುವ ಯಾವುದೇ ನ್ಯಾಯಾಲಯವು, ಜುಲ್ಮಾನೆ ವಸೂಲಾದರೆ ಇಡೀ ಜುಲ್ಮಾನೆಯನ್ನು ಅಥವಾ ಅದರ ಯಾವುದೇ ಭಾಗವನ್ನು, ಪರಿಹಾರದ ರೂಪದಲ್ಲಿ, ನ್ಯಾಯಾಲಯದ ಅಭಿಪ್ರಾಯದಲ್ಲಿ ಅಂಥ ತಪ್ಪುವಿಕೆಯಿಂದ ಹಾನಿಗೊಳಗಾದ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(3) ಮಜೂರಿಗಳ ಸಂದಾಯ ಅಧಿನಿಯಮ, 1936 (1936ರ 4)ರಲ್ಲಿ ಮಜೂರಿಗಳ ಪರಿಭಾಷೆಗೆ ಸಂಬಂಧಿಸಿದಂತೆ ಏನೇ ಇದ್ದರೂ, 31ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ನಿಯೋಜಕನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಲಾದ, ಆದರೆ ಅವನು ಸಂದಾಯ ಮಾಡಿರದ ಯಾವುದೇ ಪರಿಹಾರವನ್ನು ಆ ಅಧಿನಿಯಮದ ಉಪಬಂಧಗಳ ಮೇರೆಗೆ ವಿಳಂಬಿತ ಮಜೂರಿಯಾಗಿ ವಸೂಲು ಮಾಡಲು ಅವಕಾಶವಿರತಕ್ಕದ್ದು.

(4) ಬೀಡಿ ಅಥವಾ ಸಿಗಾರ್ ಅಥವಾ ಅವೆರಡರ ತಯಾರಿಕೆಗೆ ಸಂಬಂಧಿಸಿದ ಯಾವುದೇ ತಯಾರಿಕಾ ಪ್ರಕ್ರಿಯೆಯನ್ನು ಅಂಥ ವ್ಯಕ್ತಿಯು ಸ್ವತಃ ಅಥವಾ ಅವನ ಕುಟುಂಬದ ಯಾರೇ ಸದಸ್ಯನು ಅಥವಾ ಅವನೊಂದಿಗೆ ವಾಸಿಸುವ ಅಥವಾ ಅಂಥ ವ್ಯಕ್ತಿಯ ಮೇಲೆ ಅವಲಂಬಿತನಾದ ಯಾರೇ ಇತರ ವ್ಯಕ್ತಿಯು ಮಾಡುತ್ತಿದ್ದನೆಂಬುದು, 3ನೇ ಪ್ರಕರಣದ ಉಪಬಂಧದ ಉಲ್ಲಂಘನೆಗಾಗಿ ಯಾವನೇ ವ್ಯಕ್ತಿಯ ಪ್ರಾಸಿಕ್ಯೂಷನ್ನಿನಲ್ಲಿ ಪ್ರತಿರಕ್ಷೆಯಾಗಿರತಕ್ಕದ್ದಲ್ಲ.

34. ಕಂಪನಿಗಳಿಂದ ಅಪರಾಧಗಳು:- (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ಪ್ರಭಾರ ಹೊಂದಿದ್ದ ಹಾಗೂ ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು ಮತ್ತು ಆ ಪ್ರಕಾರ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿರುವುದು ಯಾವುದೂ, ಅಂಥ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತು ಮಾಡಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಅಂಥ ವ್ಯಕ್ತಿಯನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷ್ಯತೆಯಿಂದ ನಡೆಯಿತೆಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಆ ಪ್ರಕಾರ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ " ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಮತ್ತು ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ " ಎಂದರೆ, ಫರ್ಮಿನ ಒಬ್ಬ ಪಾಲುದಾರ.

35. ಸಂರಕ್ಷಣೆ:- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶಕ್ಕನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

36. ಅಪರಾಧದ ಸಂಜ್ಞೇಯತೆ:- (1) ಆಪಾದಿತ ಅಪರಾಧವು ನಡೆದಿರುವುದು ಇನ್ಸ್ ಪೆಕ್ಟರನ ತಿಳಿವಳಿಕೆಗೆ ಬಂದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಚೀಫ್ ಇನ್ಸ್‌ಪೆಕ್ಟರನು ಅಥವಾ ಇನ್ಸ್‌ಪೆಕ್ಟರನು ಮಾಡಿದ ಫಿರ್ಯಾದಿನ ಮೇಲಲ್ಲದೆ ಅಥವಾ ಅವನ ಲಿಖಿತ ಪೂರ್ವ ಮಂಜೂರಾತಿಯಿಲ್ಲದೆ ಯಾವ ನ್ಯಾಯಾಲಯವೂ ಈ ಅಧಿನಿಯಮದ ಮೇರೆಗೆ ದಂಡನೀಯವಾಗಬಹುದಾದ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಅಪರಾಧವು, ಸಕ್ಷಮ ಪ್ರಾಧಿಕಾರಿಯು ಮಾಡಿದ ಲಿಖಿತ ಆದೇಶದ ಉಲ್ಲಂಘನೆಯನ್ನು ಒಳಗೊಂಡಿದ್ದಲ್ಲಿ ಚೀಫ್ ಇನ್ಸ್‌ಪೆಕ್ಟರನು ಅಥವಾ ಇನ್ಸ್ ಪೆಕ್ಟರನು ಅದರ ಫಿರ್ಯಾದನ್ನು, ಅಪರಾಧವು ನಡೆದಿದೆಯೆಂದು ಆಪಾದಿಸಲಾದ ದಿನಾಂಕದಿಂದ ಆರು ತಿಂಗಳೊಳಗಾಗಿ ಮಾಡಬಹುದು.

(2) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಕೆಳದರ್ಜೆಯ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾಗಬಹುದಾದ ಯಾವುದೇ ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

37. ಕೈಗಾರಿಕಾ ನಿಯೋಜನಾ (ಸ್ಥಾಯೀ ಆದೇಶಗಳು) ಅಧಿನಿಯಮ, 1946 ಮತ್ತು ಪ್ರಸೂತಿ ಸೌಲಭ್ಯ ಅಧಿನಿಯಮ, 1961ರ ಅನ್ವಯ:- (1) ಈ ಅಧಿನಿಯಮಕ್ಕೆ ಹಿಂದಿನ ಹನ್ನೆರಡು ತಿಂಗಳ ಅವಧಿಯ ಯಾವುದೇ ದಿನದಂದು, ಐವತ್ತು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ನಿಯೋಜಿತರಾಗಿರುವ ಅಥವಾ ನಿಯೋಜಿತರಾಗಿದ್ದ ಕೈಗಾರಿಕಾ ಆವರಣವು, ಅಧಿನಿಯಮದ 1ನೇ ಪ್ರಕರಣದ (3)ನೆಯ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆಯ ಮೂಲಕ ಅದನ್ನು ಅನ್ವಯಿಸಲಾದಂಥ ಕೈಗಾರಿಕಾ ಸಂಸ್ಥೆಯಾಗಿದ್ದರೆ ಹೇಗೋ ಹಾಗೆ ಮತ್ತು ಸದರಿ ಆವರಣದಲ್ಲಿನ ನೌಕರನು ಆ ಅಧಿನಿಯಮದ ಅರ್ಥದಲ್ಲಿ ಕೆಲಸಗಾರನಾಗಿದ್ದರೆ ಹೇಗೋ ಹಾಗೆ ಅಂಥ ಪ್ರತಿಯೊಂದು ಕೈಗಾರಿಕಾ ಆವರಣಕ್ಕೆ, ಕೈಗಾರಿಕಾ ನಿಯೋಜನೆ (ಸ್ಥಾಯೀ ಆದೇಶಗಳು) ಅಧಿನಿಯಮ, 1946 (1946ರ 20)ರ ಉಪಬಂಧಗಳು ಅನ್ವಯವಾಗತಕ್ಕದ್ದು.

(2) (1)ನೆಯ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮಕ್ಕೆ ಹಿಂದಿನ ಹನ್ನೆರಡು ತಿಂಗಳ ಅವಧಿಯ ಯಾವುದೇ ದಿನದಂದು ಐವತ್ತಕ್ಕಿಂತ ಕಡಿಮೆ ನೌಕರರು ನಿಯೋಜಿತರಾಗಿರುವ ಅಥವಾ ನಿಯೋಜಿತರಾಗಿದ್ದ ಕೈಗಾರಿಕಾ ಆವರಣವು, ಅಧಿನಿಯಮದ 1ನೇ ಪ್ರಕರಣದ (3)ನೆಯ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆ ಮೂಲಕ, ಅದನ್ನು ಅನ್ವಯಿಸಿರುವ ಕೈಗಾರಿಕಾ ಆವರಣವಾಗಿದ್ದರೆ ಹೇಗೋ ಹಾಗೆ ಮತ್ತು ಸದರಿ ಆವರಣದಲ್ಲಿನ ನೌಕರನು ಆ ಅಧಿನಿಯಮದ ಅರ್ಥದಲ್ಲಿ ಕೆಲಸಗಾರನಾಗಿದ್ದರೆ ಹೇಗೋ ಹಾಗೆ, ಅಂಥ ಯಾವುದೇ ಕೈಗಾರಿಕಾ ಆವರಣಕ್ಕೆ, ಕೈಗಾರಿಕಾ ನಿಯೋಜನೆ (ಸ್ಥಾಯೀ ಆದೇಶಗಳು) ಅಧಿನಿಯಮ, 1946 (1946ರ 20)ರ ಎಲ್ಲ ಉಪಬಂಧಗಳನ್ನು ಕುರಿತು ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಎರಡು ತಿಂಗಳಿಗೆ ಕಡಿಮೆಯಿಲ್ಲದಷ್ಟು ಅವಧಿಯ ನೋಟೀಸನ್ನು ಕೊಟ್ಟ ತರುವಾಯ ಹಾಗೆ ಅನ್ವಯಿಸಬಹುದು.

(3) ಪ್ರಸೂತಿ ಸೌಲಭ್ಯ ಅಧಿನಿಯಮ, 1961 (1961ರ 53)ರಲ್ಲಿ ಏನೇ ಇದ್ದರೂ, ಯಾವುದೇ ಕಾರ್ಯ ಸಂಸ್ಥೆಯು, ಆ ಅಧಿನಿಯಮದ 2ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆ ಮೂಲಕ ಅದನ್ನು ಅನ್ವಯಿಸಿದ ಒಂದು ಕಾರ್ಯ ಸಂಸ್ಥೆಯಾಗಿದ್ದರೆ ಹೇಗೋ ಹಾಗೆ ಅಂಥ ಪ್ರತಿಯೊಂದು ಕಾರ್ಯ ಸಂಸ್ಥೆಗೆ ಆ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸತಕ್ಕದ್ದು:

ಪರಂತು, ಸದರಿ ಅಧಿನಿಯಮವನ್ನು ಮನೆಕೆಲಸಗಾರನಿಗೆ ಅನ್ವಯ ಮಾಡುವಲ್ಲಿ ಈ ಮುಂದಿನ ಮಾರ್ಪಾಟುಗಳಿಗೊಳಪಟ್ಟು ಅನ್ವಯಿಸತಕ್ಕದ್ದು, ಎಂದರೆ:-

(ಎ) 5ನೇ ಪ್ರಕರಣದ (1)ನೇ ಉಪ-ಪ್ರಕರಣದ ವಿವರಣೆಯಲ್ಲಿ "ಅಥವಾ ಒಂದು ದಿನಕ್ಕೆ ಒಂದು ರೂಪಾಯಿ, ಇವೆರಡರಲ್ಲಿ ಯಾವುದು ಹೆಚ್ಚೋ ಅದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ಬಿ) 8 ಮತ್ತು 10ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು.

38. ಕೆಲವು ಉಪಬಂಧಗಳು ಕೈಗಾರಿಕಾ ಆವರಣಗಳಿಗೆ ಅನ್ವಯಿಸದಿರುವುದು:- (1) ಕಾರ್ಖಾನೆಗಳ ಅಧಿನಿಯಮ, 1948 (1948ರ 62)ರ IVನೇ ಅಧ್ಯಾಯವನ್ನು ಮತ್ತು 85ನೇ ಪ್ರಕರಣವನ್ನು ಕೈಗಾರಿಕಾ ಆವರಣಗಳಿಗೆ ಅನ್ವಯಿಸತಕ್ಕದ್ದು ಮತ್ತು ಆ ಅಧಿನಿಯಮದ ಉಳಿದ ಉಪಬಂಧಗಳನ್ನು ಯಾವುದೇ ಕೈಗಾರಿಕಾ ಆವರಣಗಳಿಗೆ ಅನ್ವಯಿಸತಕ್ಕದ್ದಲ್ಲ.

(2) ಅಂಗಡಿಗಳಲ್ಲಿ ಅಥವಾ ವಾಣಿಜ್ಯ ಕಾರ್ಯ ಸಂಸ್ಥೆಗಳಲ್ಲಿ ಕೆಲಸಗಾರರ ಕೆಲಸದ ಸ್ಥಿತಿಯನ್ನು ವಿನಿಯಮಿಸುವುದಕ್ಕೆ ಸಂಬಂಧಿಸುವ ಯಾವುದೇ ಕಾನೂನಿನಲ್ಲಿ ಇರುವುದು ಯಾವುದೂ, ಈ ಅಧಿನಿಯಮವು ಅನ್ವಯವಾಗುವ ಯಾವುದೇ ಕಾರ್ಯಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ.

39. ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ಅನ್ವಯ:- (1) ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ (1947ರ 14) ಉಪಬಂಧಗಳು ಪ್ರತಿಯೊಂದು ಕೈಗಾರಿಕಾ ಆವರಣದ ಸಂಬಂಧದಲ್ಲಿ ಉದ್ಭವಿಸುವ ವಿಷಯಗಳಿಗೆ ಅನ್ವಯವಾಗತಕ್ಕದ್ದು.

(2) (1)ನೇ ಉಪ-ಪ್ರಕರಣಲ್ಲಿ ಏನೇ ಇದ್ದರೂ,-

(ಎ) ನಿಯೋಜಕನು ನೌಕರರಿಗೆ ಕಚ್ಚಾ ಸಾಮಗ್ರಿಗಳನ್ನು ನೀಡುವುದಕ್ಕೆ ;

(ಬಿ) ನೌಕರನು ತಯಾರಿಸಿದ ಬೀಡಿ ಅಥವಾ ಸಿಗಾರ್ ಅಥವಾ ಇವೆರಡನ್ನೂ ನಿಯೋಜಕನು ತಿರಸ್ಕರಿಸುವುದಕ್ಕೆ;

(ಸಿ) ನಿಯೋಜಕನು ತಿರಸ್ಕರಿಸಿದ ಬೀಡಿ ಅಥವಾ ಸಿಗರೇಟು ಅಥವಾ ಇವೆರಡರ ಮಜೂರಿಯ ಸಂದಾಯಕ್ಕೆ

- ಸಂಬಂಧಿಸಿದಂತೆ ನಿಯೋಜಕನು ಮತ್ತು ನೌಕರನ ನಡುವಿನ ವಿವಾದವನ್ನು, ರಾಜ್ಯ ಸರ್ಕಾರವು ಈ ಕುರಿತು ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗಾಗಿ ಮತ್ತು ಅಂಥ ಪ್ರಾಧಿಕಾರವು ಇತ್ಯರ್ಥಪಡಿಸುವುದಕ್ಕಾಗಿ ಉಲ್ಲೇಖಿಸತಕ್ಕದ್ದು ಮತ್ತು ಅಂಥ ವಿವಾದವನ್ನು ಕ್ಷಿಪ್ರ ರೀತಿಯಲ್ಲಿ ಇತ್ಯರ್ಥಪಡಿಸುವುದಕ್ಕಾಗಿ ಸಹ ಅಂಥ ನಿಯಮಗಳಲ್ಲಿ ಉಪಬಂಧ ಕಲ್ಪಿಸತಕ್ಕದ್ದು.

(3) (2)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾದ ಪ್ರಾಧಿಕಾರವು ಮಾಡಿದ ಇತ್ಯರ್ಥದಿಂದ ಬಾಧಿತನಾದ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಕ್ಕೆ ಮತ್ತು ಅಂಥ ಅವಧಿಯೊಳಗಾಗಿ ಅಪೀಲನ್ನು ಸಲ್ಲಿಸಬಹುದು.

(4) (3)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾದ ಪ್ರಾಧಿಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು.

40. ಈ ಅಧಿನಿಯಮಕ್ಕೆ ಅಸಂಗತವಾಗಿರುವ ಕಾನೂನುಗಳ ಮತ್ತು ಒಪ್ಪಂದಗಳ ಪರಿಣಾಮ:- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚಿನ ಅಥವಾ ತರುವಾಯದ ಯಾವುದೇ ಐತೀರ್ಪು, ಒಪ್ಪಂದ ಅಥವಾ ಸೇವಾ ಕರಾರಿನ ನಿಬಂಧನೆಗಳಲ್ಲಿ ಒಳಗೊಂಡ ಯಾವುದೇ ಸಂಗತಿಯು ಈ ಅಧಿನಿಯಮಕ್ಕೆ ಅಸಂಗತವಾಗಿದ್ದರೂ ಅದರ ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದು:

ಪರಂತು, ಯಾವುದೇ ಅಂಥ ಐತೀರ್ಪು, ಒಪ್ಪಂದ, ಸೇವಾ ಕರಾರಿನ ಮೇರೆಗೆ ಅಥವಾ ಅನ್ಯಥಾ ನೌಕರನು ಈ ಅಧಿನಿಯಮದ ಮೇರೆಗೆ, ಅವನು ಯಾವುದೇ ವಿಷಯಗಳ ಸಂಬಂಧದಲ್ಲಿ ಹಕ್ಕುಳ್ಳವನಾಗುವ ಸೌಲಭ್ಯಗಳಿಗಿಂತ ಹೆಚ್ಚು ಅನುಕೂಲವಾದ ಸೌಲಭ್ಯಗಳಿಗೆ ಹಕ್ಕುಳ್ಳವನಾಗಿರುವಲ್ಲಿ ನೌಕರನು ಈ ಅಧಿನಿಯಮದ ಮೇರೆಗೆ ಇತರ ವಿಷಯಗಳ ಸಂಬಂಧದಲ್ಲಿ ಅವನು ಸೌಲಭ್ಯಗಳನ್ನು ಪಡೆದಿದ್ದರೂ, ಆ ವಿಷಯದ ಸಂಬಂಧದಲ್ಲಿ ಹೆಚ್ಚು ಅನುಕೂಲಕರ ಸೌಲಭ್ಯಗಳಿಗೆ ಹಕ್ಕುಳ್ಳವನಾಗಿರುವುದು ಮುಂದುವರಿಯತಕ್ಕದ್ದು.

(2) ನೌಕರನು ಈ ಅಧಿನಿಯಮದ ಮೇರೆಗೆ ಹಕ್ಕುಳ್ಳವನಾಗಿರುವುದಕ್ಕಿಂತ ಅವನಿಗೆ ಹೆಚ್ಚು ಅನುಕೂಲಕರವಾಗಿರುವಂಥ ಯಾವುದೇ ವಿಷಯದ ಸಂಬಂಧದಲ್ಲಿ ಅವನಿಗೆ ಹಕ್ಕುಗಳನ್ನು ಅಥವಾ ವಿಶೇಷ ಹಕ್ಕುಗಳನ್ನು ಮಂಜೂರು ಮಾಡುವುದಕ್ಕಾಗಿ ನಿಯೋಜಕನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವುದರಿಂದ ಯಾವನೇ ನೌಕರನನ್ನು ಈ ಅಧಿನಿಯಮದಲ್ಲಿರುವುದು ಯಾವುದೂ ಪ್ರತಿವಾರಿಸುವುದೆಂದು ಅರ್ಥಕಲ್ಪಿಸತಕ್ಕದ್ದಲ್ಲ.

41. ವಿನಾಯಿತಿಗೊಳಿಸುವ ಅಧಿಕಾರ:- ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದು ವಿಧಿಸಬಹುದಾದಂಥ ಷರತ್ತುಗಳು ಮತ್ತು ಪರಿಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳ ಎಲ್ಲಾ ಅಥವಾ ಯಾವುದೇ ಉಪಬಂಧಗಳಿಂದ ಯಾವುದೇ ವರ್ಗ ಅಥವಾ ಕೈಗಾರಿಕಾ ಆವರಣವನ್ನು ಅಥವಾ ನಿಯೋಜಕರ ಅಥವಾ ನೌಕರರ ವರ್ಗವನ್ನು ವಿನಾಯಿತಿಗೊಳಿಸಬಹುದು:

ಪರಂತು, ಸಂಬಳ ಸಹಿತ ವಾರ್ಷಿಕ ರಜೆ, ಹೆರಿಗೆ ಸೌಲಭ್ಯಗಳು, ಮಕ್ಕಳ ಪಾಲನಾ ಗೃಹಗಳು, ಮಜೂರಿ, ಬೀಡಿ ಅಥವಾ ಸಿಗಾರ್ ಮತ್ತು ರಾತ್ರಿ ಕೆಲಸದ ತಿರಸ್ಕಾರ- ಇವುಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ

ಯಾವುದೇ ನಿಯಮಗಳ ಯಾವುದೇ ಉಪಬಂಧಗಳಿಂದ ಯಾರೇ ಮಹಿಳಾ ನೌಕರಳ ಸಂಬಂಧದಲ್ಲಿ ಯಾವುದೇ ವಿನಾಯಿತಿಯನ್ನು ಮಂಜೂರು ಮಾಡುವುದಕ್ಕೆ ರಾಜ್ಯ ಸರ್ಕಾರವು ಅಧಿಕೃತಗೊಳಿಸುವುದೆಂದು ಈ ಪ್ರಕರಣದಲ್ಲಿರುವ ಯಾವುದನ್ನೂ ಅರ್ಥೈಸತಕ್ಕದ್ದಲ್ಲ.

42. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರಗಳು:- ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು.

43. ಖಾಸಗಿ ವಾಸದ ಮನೆಗಳಲ್ಲಿ ಸ್ವಯಂ ನಿಯೋಜಿತ ವ್ಯಕ್ತಿಗಳಿಗೆ ಅಧಿನಿಯಮವು ಅನ್ವಯವಾಗದಿರುವುದು:- ವಾಸದ ಮನೆಯಲ್ಲಿ ಒಡೆಯನೊಂದಿಗೆ ವಾಸಿಸುವ ಅವನ ಕುಟುಂಬದ ಮತ್ತು ಅವನ ಮೇಲೆ ಅವಲಂಬಿಸಿರುವ ಸದಸ್ಯರ ಸಹಾಯದಿಂದ ಖಾಸಗಿ ವಾಸದ ಮನೆಯಲ್ಲಿ ಯಾವುದೇ ತಯಾರಿಕಾ ಪ್ರಕ್ರಿಯೆಯನ್ನು ನಡೆಸುವಂಥ ಖಾಸಗಿ ವಾಸದ ಮನೆಯ ಒಡೆಯನಿಗೆ ಅಥವಾ ಅನುಭೋಗದಾರನಿಗೆ ಈ ಅಧಿನಿಯಮದಲ್ಲಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮವು ಅನ್ವಯವಾಗುವಂಥ ಖಾಸಗಿ ವಾಸದ ಮನೆಯ ಒಡೆಯ ಅಥವಾ ಅನುಭೋಗದಾರನು ನಿಯೋಜಿತನಾಗಿರಕೂಡದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ "ಕುಟುಂಬ" ಎಂದರೆ, ಒಡೆಯನ ಅಥವಾ ಅನುಭೋಗದಾರನ ಗಂಡ ಹೆಂಡತಿ ಮತ್ತು ಮಕ್ಕಳು.

44. ನಿಯಮಗಳನ್ನು ರಚಿಸಲು ಅಧಿಕಾರ:- (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) ಯಾವ ಷರತ್ತುಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ನೀಡಬಹುದೋ ಅಥವಾ ನವೀಕರಿಸಬಹುದೋ ಅಂಥ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅಂಥ ಲೈಸೆನ್ಸಿನ ಸಂಬಂಧದಲ್ಲಿ ಯಾವ ಶುಲ್ಕಗಳನ್ನು ಸಂದಾಯ ಮಾಡಬೇಕಾಗಿದೆಯೋ ಅಂಥ ಶುಲ್ಕಗಳು;

(ಬಿ) ಈ ಅಧಿನಿಯಮದ ಮೇರೆಗೆ ಲೈಸೆನ್ಸಿಗಾಗಿ ಸಲ್ಲಿಸುವ ಅರ್ಜಿಯ ನಮೂನೆ ಮತ್ತು ಅಂಥ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಸ್ತಾವೇಜುಗಳು ಮತ್ತು ನಕ್ಷೆಗಳು;

(ಸಿ) ಲೈಸೆನ್ಸನ್ನು ನೀಡಲು ಅಥವಾ ನೀಡುವುದನ್ನು ತಿರಸ್ಕರಿಸಲು ಸಕ್ಷಮ ಪ್ರಾಧಿಕಾರಿಯು ಪರಿಗಣನೆಗೆ ತೆಗೆದುಕೊಳ್ಳಬೇಕಾದಂಥ ಇತರ ವಿಷಯಗಳು;

(ಡಿ) ಲೈಸೆನ್ಸನ್ನು ನೀಡುವ ಅಥವಾ ನೀಡುವುದನ್ನು ತಿರಸ್ಕರಿಸುವ ಯಾವುದೇ ಆದೇಶದ ವಿರುದ್ಧ ಅಪೀಲುಗಳನ್ನು ಯಾವ ಅವಧಿಯೊಳಗಾಗಿ ಸಲ್ಲಿಸಬೇಕು ಮತ್ತು ಯಾವ ಪ್ರಾಧಿಕಾರಿಗೆ ಸಲ್ಲಿಸಬೇಕು, ಎಷ್ಟು ಶುಲ್ಕವನ್ನು ಸಂದಾಯ ಮಾಡಬೇಕು ಎಂಬ ವಿಚಾರ;

(ಇ) ಕೇಂದ್ರ ಉತ್ಪಾದನಾ ಸುಂಕ ಇಲಾಖೆಯು ಬಿಡುಗಡೆ ಮಾಡಿದ ಹೊಗೆಸೊಪ್ಪಿನ ಮೊತ್ತವನ್ನು ಮತ್ತು ಅವನು ತಯಾರಿಸಿದ ಬೀಡಿ ಅಥವಾ ಸಿಗರೇಟು ಅಥವಾ ಅವೆರಡರ ಸಂಖ್ಯೆಯನ್ನು ನಿರ್ದಿಷ್ಟಪಡಿಸಿ ಸಕ್ಷಮ ಪ್ರಾಧಿಕಾರಕ್ಕೆ ನಿಯೋಜಕನು ಮಾಸಿಕ ರಿಟರ್ನ್ ಸಲ್ಲಿಸುವುದು;

(ಎಫ್) ಈ ಅಧಿನಿಯಮದ ಮೇರೆಗೆ ಇನ್ಸ್‌ಪೆಕ್ಟರಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು;

(ಜಿ) ಈ ಅಧಿನಿಯಮದ ಮೇರೆಗೆ ನಿರ್ವಹಿಸಬೇಕಾದ ಸ್ವಚ್ಛತೆಯ ಪ್ರಮಾಣಗಳು;

(ಎಚ್) ಈ ಅಧಿನಿಯಮದ ಮೇರೆಗೆ ನಿರ್ವಹಿಸಬೇಕಾದ ದೀಪದ ವ್ಯವಸ್ಥೆ, ಗಾಳಿ, ಬೆಳಕು, ಮತ್ತು ತಾಪದ ಪ್ರಮಾಣಗಳು;

(ಐ) ಈ ಅಧಿನಿಯಮದ ಮೇರೆಗೆ ಒದಗಿಸತಕ್ಕ ಮೂತ್ರಾಲಯಗಳ ಮತ್ತು ಕಕ್ಕಸುಗಳ ಮಾದರಿಗಳು;

(ಜೆ) ಈ ಅಧಿನಿಯಮದ ಮೇರೆಗೆ ಒದಗಿಸಬೇಕಾದ ತೊಳೆಯುವ ಸೌಲಭ್ಯಗಳು;

(ಕೆ) ಕ್ಯಾಂಟೀನುಗಳು;

(ಎಲ್) ಕೆಲಸದ ಅವಧಿಯ ಬಗ್ಗೆ ಕೊಡತಕ್ಕ ನೋಟೀಸಿನ ನಮೂನೆ ಮತ್ತು ರೀತಿ;

(ಎಂ) ಕಾರ್ಯಸಂಸ್ಥೆಯ ಹೊರಗೆ ಮಾಡಲಾದ ಕೆಲಸದ ದಾಖಲೆಗಳನ್ನು ನಿರ್ವಹಿಸತಕ್ಕ ನಮೂನೆ;

(ಎನ್) ವಜಾ ಮಾಡಲಾದ, ಬಿಡುಗಡೆ ಮಾಡಲಾದ ಅಥವಾ ತೆಗೆದುಹಾಕಿದ ನೌಕರನು ಯಾವ ಪ್ರಾಧಿಕಾರಕ್ಕೆ ಮತ್ತು ಯಾವ ಸಮಯದೊಳಗೆ ಅಪೀಲನ್ನು ಸಲ್ಲಿಸಬಹುದೋ ಆ ಪ್ರಾಧಿಕಾರ ಮತ್ತು ಸಮಯ;

(ಓ) ಆಹಾರ ಧಾನ್ಯಗಳು ಮತ್ತು ಇತರ ವಸ್ತುಗಳನ್ನು ನೌಕರನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿಸುವುದರಿಂದ ಅವನಿಗೆ ಕೂಡಿಬರುವ ಅನುಕೂಲಕ್ಕೆ ಸಮಾನವಾದ ನಗದು ಮೊತ್ತವನ್ನು ಲೆಕ್ಕಹಾಕತಕ್ಕ ರೀತಿ;

(ಪಿ) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ಉದ್ದೇಶಕ್ಕಾಗಿ ಕಾರ್ಯ ಸಂಸ್ಥೆಯಲ್ಲಿ ಇಡತಕ್ಕ ದಾಖಲೆಗಳು ಮತ್ತು ರಿಜಿಸ್ಟರುಗಳು;

(ಕ್ಯೂ) ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳನ್ನು ಅಥವಾ ಕಪಾಟುಗಳನ್ನು ಮತ್ತು ಅದರ ಒಳವಸ್ತುಗಳನ್ನು ನಿರ್ವಹಿಸಲು ಮತ್ತು ಯಾವ ವ್ಯಕ್ತಿಗಳ ಪ್ರಭಾರದಲ್ಲಿ ಅಂಥ ಪೆಟ್ಟಿಗಳನ್ನು ಇಡತಕ್ಕದ್ದು ಎಂಬ ವಿಚಾರ;

(ಆರ್) ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ವಿಂಗಡಿಸತಕ್ಕ ಅಥವಾ ತಿರಸ್ಕರಿಸತಕ್ಕ ಮತ್ತು ತಿರಸ್ಕರಿಸಿದ ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ವಿಲೆ ಮಾಡತಕ್ಕ ರೀತಿ;

(ಎಸ್) ಒಬ್ಬ ನೌಕರನು ತಯಾರಿಸಿದ ಬೀಡಿ ಅಥವಾ ಸಿಗಾರ್ ಅಥವಾ ಅವೆರಡರ ತಿರಸ್ಕರಣೆಯ ಶೇಕಡಾವಾರಿನ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು;

(ಟಿ) ಮನೆಯಲ್ಲಿ ಬೀಡಿ ಅಥವಾ ಸಿಗಾರ್ ಅಥವಾ ಅವೆರಡನ್ನೂ ತಯಾರಿಸುವುದಕ್ಕಾಗಿ ಕಚ್ಚಾ ಸಾಮಗ್ರಿಯನ್ನು ನೇರವಾಗಿ ಅಥವಾ ಒಬ್ಬ ಏಜೆಂಟ್ ಮೂಲಕ ಸ್ವೀಕರಿಸುವ ವ್ಯಕ್ತಿಗೆ ಮಜೂರಿಯನ್ನು ಸಂದಾಯ ಮಾಡತಕ್ಕ ಸ್ಥಳವನ್ನು ನಿರ್ದಿಷ್ಟಪಡಿಸುವುದು;

(ಯು) ನೌಕರರಿಗೆ ಬೀಡಿ ಮತ್ತು ಹೊಗೆಸೊಪ್ಪಿನ ಎಲೆಗಳೂ ಸೇರಿದಂತೆ ಕಚ್ಚಾ ಸಾಮಗ್ರಿಯ ಹಂಚಿಕೆಯ ಮೇಲೆ ಪರಿಶೀಲಕರ ಮೇಲ್ವಿಚಾರಣೆ;

(ವಿ) ಕೆಲಸಗಾರರ ಸುರಕ್ಷತೆಗಾಗಿ ಬೆಂಕಿ ಆಕಸ್ಮಿಕದ ವಿರುದ್ಧ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು;

(ಡಬ್ಲ್ಯೂ) 39ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿವಾದವನ್ನು ಇತ್ಯರ್ಥಕ್ಕಾಗಿ ಉಲ್ಲೇಖಿಸಬೇಕಾದ ಕಾಲಮಿತಿ, ಅಂಥ ವಿವಾದವನ್ನು ಇತ್ಯರ್ಥಪಡಿಸತಕ್ಕ ಪ್ರಾಧಿಕಾರ ಮತ್ತು ಕ್ಷಿಪ್ರ ವಿಧಾನ ಮತ್ತು ಮೊದಲು ಉಲ್ಲೇಖಿಸಿದ ಪ್ರಾಧಿಕಾರವು ಮಾಡಿದ ಇತ್ಯರ್ಥದ ಮೇಲೆ ಯಾವ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಲು ಅವಕಾಶವಿರುವುದೋ ಆ ಪ್ರಾಧಿಕಾರ;

(ಎಕ್ಸ್) ಅಗತ್ಯಪಡಿಸಬೇಕಾದ ಅಥವಾ ನಿಯಮಿಸಬೇಕಾದ ಯಾವುದೇ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲಾ ನಿಯಮಗಳು ರಾಜಪತ್ರದಲ್ಲಿ ಪ್ರಕಟವಾಗತಕ್ಕದ್ದು ಮತ್ತು ಮುಂಚಿನ ಪ್ರಕಟಣೆಯ ಷರತ್ತಿಗೆ ಒಳಪಟ್ಟಿರತಕ್ಕದ್ದು; ಮತ್ತು ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 23ನೇ ಪ್ರಕರಣದ (3)ನೇ ಖಂಡದ ಮೇರೆಗೆ ನಿರ್ದಿಷ್ಟಪಡಿಸಬೇಕಾದ ದಿನಾಂಕಗಳು, ಪ್ರಸ್ತಾವಿತ ನಿಯಮಗಳ ಕರಡನ್ನು ಪ್ರಕಟಿಸಿದ ದಿನಾಂಕದಿಂದ ಮೂರು ತಿಂಗಳುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಹೊಂದಿರುವಲ್ಲಿ, ಅದರ ಪ್ರತಿಯೊಂದು ಸದನದ ಮುಂದೆ, ಅಥವಾ ಅಂಥ ವಿಧಾನ ಮಂಡಲವು ಒಂದು ಸದನವನ್ನು ಹೊಂದಿರುವಲ್ಲಿ, ಆ ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನದ ಅಥವಾ ಅದರ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ವಿಧಾನ ಮಂಡಲವು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಆ ವಿಧಾನ ಮಂಡಲವು ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ನಿಯಮವು ಆ ತರುವಾಯ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

* * * * *

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು-58/DPAL/C-8